ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ಬಿಸನಾಳ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಪ್ರಕಾಶ ಗ. ಖಾಡೆ**

ಲೇಖಕರು

**ಡಾ. ವಿನಯಕುಮಾರ ಹಿರೇಮಠ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**BISANALA:** An Introducing Book on the Places in Karnataka that Played a Major Role in the Freedom Struggle, Dr. Vinayakumar Hiremath, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/–
ಪುಟ: ೫೬


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೪೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೊ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಭಾರತದ ರಾಷ್ಟ್ರೀಯ ಚಳುವಳಿ ಎಂದರೆ ಅದು ಇತರ ದೇಶಗಳ ಸ್ವಾತಂತ್ರ್ಯ ಚಳುವಳಿಗಿಂತ ಭಿನ್ನವಾಗಿರುವುದು. ಬಹುತ್ವದ ಭಾರತದಲ್ಲಿ ಎಲ್ಲ ವರ್ಗದವರನ್ನು ಒಗ್ಗೂಡಿಸಿ ಚಳುವಳಿ ಮಾಡುವುದೆಂದರೆ ಸಾಮಾನ್ಯ ಮಾತೇನಲ್ಲ.

ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ಇಲ್ಲಿನ ರಾಜಕೀಯ ಪರಿಸ್ಥಿತಿಗಳ ಲಾಭ ಪಡೆದು ಸಾರ್ವಭೌಮಧಿಕಾರಿಗಳಾದರು. ತಮಗೆ ಅನುಕೂಲವಾದ ಕಾನೂನುಗಳನ್ನು ಜಾರಿಗೆ ತಂದು ಭಾರತೀಯರನ್ನು ಶೋಷಿದರು. ಲಾರ್ಡ್‌ವೆಲ್ಲೆಸ್ಲಿಯ 'ಸಹಾಯಕ ಸೈನ್ಯ ಪದ್ಧತಿ', ಲಾರ್ಡ್ ಡೌಲ್‌ಹೌಸಿಯ 'ದತ್ತು ಮಕ್ಕಳಿಗೆ ಹಕ್ಕಿಲ್ಲ'ವೆಂಬ ನೀತಿಗಳು ಭಾರತೀಯ ಆಳರಸರ ಕ್ಷಾತ್ರ ತೇಜಸ್ಸನ್ನು ನಶಿಸುವಂತೆ ಮಾಡಿದವು. ಅಲ್ಲದೆ ಕಾಲ ಕಾಲಕ್ಕೆ ತಂದ ಜಮೀನ್ದಾರಿ ಪದ್ಧತಿ, ರೈತವಾರಿ ಪದ್ಧತಿ, ಮಹಲ್‌ವಾರಿ ಭೂ ಕಂದಾಯ ಪದ್ಧತಿಗಳು ಭಾರತೀಯ ರೈತರ ಬೆನ್ನು ಮೂಳೆಗಳನ್ನು ಮುರಿದವು. ಇತಿಹಾಸಕಾರರು ಭಾರತದ ಸಂಪತ್ತು ಹೇಗೆ ಲೂಟಿಯಾಗುತ್ತಿದೆ ಎಂಬುದನ್ನು ಹೀಗೆ ಟೀಕಿಸಿದ್ದಾರೆ. 'ಗಂಗಾನದಿಯ ಸಂಪತ್ತನ್ನು ಬ್ರಿಟಿಷರು ಥೇಮ್ಸ್ ನದಿಯ ದಡದಲ್ಲಿ ಸುರಿದರು'.

ಭಾರತೀಯ ರಾಷ್ಟ್ರೀಯ ಚಳವಳಿ ಮಂದಗಾಮಿಗಳ, ತೀವ್ರಗಾಮಿಗಳ ಹಾಗೂ ಗಾಂಧಿ ಕಾಲದಲ್ಲಿ ನಡೆದಿರುವುದು ವಿಶೇಷವಾದದ್ದು ಈ ಮೂರು ಘಟ್ಟಗಳ ಹೊರತಾಗಿ ಶಸ್ತ್ರಾಸ್ತ್ರ ಬಂಡಾಯಗಳು ನಡೆದಿರುವುದು ದಾಖಲಾರ್ಹವಾಗಿದೆ. ಈ ಎಲ್ಲ ಹೋರಾಟಗಳಲ್ಲಿ ಭಾರತದ ಪ್ರತಿ ಪ್ರಾಂತಗಳು ಸ್ಪಂದಿಸಿವೆ

ಅಂದಿನ ಅಖಂಡ ವಿಜಾಪುರ ಜಿಲ್ಲೆಯಲ್ಲಿಯೂ ಸ್ವಾತಂತ್ರ್ಯ ಚಳುವಳಿ ಹಲವಾರು ರೀತಿಯಲ್ಲಿ ನಡೆದಿದೆ. ರಾಷ್ಟ್ರೀಯ ನಾಯಕರ ಕರೆಗೆ ಓಗೊಟ್ಟು ಇಲ್ಲಿಯ ಜನಸಮಾನ್ಯರು ಮತ್ತು ಸ್ಥಳೀಯ ನಾಯಕರು ಸ್ವಾತಂತ್ರ್ಯ ಯಜ್ಞದಲ್ಲಿ ತನು–ಮನ–ಧನದಿಂದ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಗಾಂಧೀಜಿಯವರ ಚಳುವಳಿಗಳಲ್ಲಿ ಸವಿನಯ ಕಾನೂನು ಭಂಗ ಚಳುವಳಿಯೂ ಒಂದು. ಸರಕಾರ ರಚಿಸಿದ ಕಾಯ್ದೆಗಳನ್ನು ಅಹಿಂಸಾತ್ಮಕವಾಗಿ ಮುರಿಯುವುದರ ಮೂಲಕ ಬ್ರಿಟಿಷ್ ಸಾಮ್ರಾಜ್ಯಕ್ಕೆ ಪ್ರತಿರೋಧ ಒಡ್ಡುವುದಾಗಿತ್ತು. ಉಪ್ಪಿನ ಮೇಲೆ ತೆರಿಗೆ ಹೆಚ್ಚಿಸಿದಾಗ ಗಾಂಧಿಯವರು ಕಾನೂನು ಭಂಗ ಚಳುವಳಿಯ ಭಾಗವಾಗಿ ಉಪ್ಪಿನ ಸತ್ಯಾಗ್ರಹವನ್ನು ಆರಂಭಿಸಿ ತಮ್ಮ ೭೮ ಜನ ಅನುಯಾಯಿಗಳೊಂದಿಗೆ ಗುಜರಾತಿನ ಸಾಬರಮತಿ ಆಶ್ರಮದಿಂದ ದಂಡಿಯವರೆಗೆ ದಿನಾಂಕ: ೧೨ ಮಾರ್ಚ ೧೯೩೦ ರಿಂದ ಏಪ್ರಿಲ್ ೬ ರವರೆಗೆ ೨೪೦ ಮೈಲುಗಳವರೆಗೆ ಕಾಲ್ನೆಡಿಗೆಯಲ್ಲಿ ದಂಡಿಯಾತ್ರೆ ಕೈಗೊಂಡು ಏಪ್ರಿಲ್ ೬ ರಂದು ಮುಂಜಾನೆ ೮.೩೦ ಗಂಟೆಗೆ ಉಪ್ಪಿನ ಕಾಯ್ದೆಯನ್ನು ಮುರಿದು ಭಾರತದಲ್ಲಿ ಎಲ್ಲಿ ಸಾಧ್ಯವಾಗುವುದೋ ಅಲ್ಲಿ ಜನರು ಉಪ್ಪನ್ನು ತಯಾರಿಸಿ ಕಾಯ್ದೆಯನ್ನು ಭಂಗಗೊಳಿಸಲು ದೇಶದ ಜನತೆಗೆ ಕರೆ ನೀಡಿದರು. ಅದರಂತೆ ಕರ್ನಾಟಕದಲ್ಲಿ ಅಂಕೋಲಾದಲ್ಲಿ ಉಪ್ಪಿನ ಸತ್ಯಾಗ್ರಹ ನಡೆದಿರುವುದು ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ.

ಅದೇ ಸಂದರ್ಭದಲ್ಲಿ ಬರದಿಂದ ಬಿರಿದ ಬಯಲುನಾಡು ಎಂದು ಕರೆಸಿಕೊಳ್ಳುವ ಇಂದಿನ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಬಿಸನಾಳ ಎಂಬ ಪುಟ್ಟ ಗ್ರಾಮದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಯಿತು. ಸಮುದ್ರವು ಇರದ ಈ ಜಿಲ್ಲೆಯಲ್ಲಿ ಗಾಂಧೀಜಿಯವರ ಆದೇಶ ಪಾಲಿಸಬೇಕೆಂಬ ಒಂದೇ ಒಂದು ಉದ್ದೇಶದಿಂದ ಇಲ್ಲಿಯ ಜನರು ಹಳ್ಳದ ದಡದಲ್ಲಿರುವ ಸವಳು ಭೂಮಿಯ ಮಣ್ಣಿನಿಂದ ಉಪ್ಪನ್ನು ತಯಾರಿಸಿ ಸುಮಾರು ಮೂರು ತಿಂಗಳುಗಳ ಕಾಲ ಸತ್ಯಾಗ್ರಹವನ್ನು ನಡೆಸಿದರು. ನಾನು ಬಾಗಲಕೋಟೆ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ ಕುರಿತು ಪಿಎಚ್.ಡಿ ಮಾಡುವಾಗ ಈ ಅಂಶವನ್ನು ಇನ್ನಷ್ಟು ಬೆಳಕಿಗೆ ತರಲು ಪ್ರಯತ್ನಿಸಿರುವೆ. ಗಾಂಧೀಯವರು ದಂಡಿಯಾತ್ರೆ ಕೈಗೊಂಡರೆ ಇಲ್ಲಿಯ ಜನರು ಬಾಗಲಕೋಟೆಯಿಂದ ಬಿಸನಾಳವರೆಗೆ ೫೧ ಮೈಲು ಯಾತ್ರೆ



ಕೈಗೊಂಡಿದ್ದು ವಿಶೇಷವಾಗಿದೆ. ಈ ನನ್ನ ಪುಟ್ಟ ಗ್ರಂಥದಲ್ಲಿ ಅಂದು ನಿರಕ್ಷರಸ್ಥರಾಗಿದ್ದ ಭಾರತೀಯರನ್ನು ಸ್ವಾತಂತ್ರ್ಯ ಚಳುವಳಿಗೆ ಪ್ರೇರೇಪಿಸಲು ರಚನೆಗೊಂಡ ಗೀಗಿಪದ, ಲಾವಣಿ, ಚಳುವಳಿ ಕುರಿತಾದ ಗೀತೆಗಳನ್ನು ಸಂಗ್ರಹಿಸಿ ನೀಡಿರುವೆನು.

ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಡಾ.ಬಿ.ವಿ.ವಸಂತಕುಮಾರ್ ಅವರ ನೇತೃತ್ವದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೭೫ ಸ್ವಾತಂತ್ರ್ಯ ಸಂಗ್ರಾಮದ ಶಕ್ತಿ ಕೇಂದ್ರಗಳನ್ನು ದಾಖಲಿಸುವ ಕಾರ್ಯ ಕೈಗೆತ್ತಿಕೊಂಡಿರುವುದು ಸ್ವಾಗತರ್ಹ ಕಾರ್ಯವಾಗಿದೆ. ಈ ಸುಸಂದರ್ಭದಲ್ಲಿ ನನಗೆ ಬಿಸನಾಳದ ಬಗ್ಗೆ ಬರೆಯಲು ಅವಕಾಶ ಮಾಡಿಕೊಟ್ಟ ಅಕಾಡೆಮಿಯ ಅಧ್ಯಕ್ಷರು ಹಾಗೂ ಸರ್ವಸದಸ್ಯರಿಗೂ ಧನ್ಯವಾದಗಳು. ಹಾಗೂ ಈ ಯೋಜನೆಯ ಸಂಪಾದಕರಲ್ಲಿ ಒಬ್ಬರಾದ ಡಾ. ಪ್ರಕಾಶ ಗ. ಖಾಡೆಯವರಿಗೆ ಮತ್ತು ಈ ನನ್ನ ಕಾರ್ಯದಲ್ಲಿ ನನಗೆ ಸಹಕರಿಸಿದ ಪ್ರತಿಯೊಬ್ಬರಿಗೂ ಅನಂತ ಧನ್ಯವಾದಗಳು.

**ಡಾ. ವಿನಯಕುಮಾರ ಹಿರೇಮಠ**

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ ಬಿಸನಾಳ: ಕಾನೂನು ಭಂಗ ಚಳವಳಿ | ೧೭ |
| ರಾಷ್ಟ್ರ ಮಟ್ಟದಲ್ಲಿ ಕಾನೂನುಭಂಗ ಚಳವಳಿ: ಪೂರ್ಣ ಸ್ವರಾಜ್ಯ ಘೋಷಣೆ | ೧೭ |
| ಸಾಬರಮತಿ ನಿರ್ಣಯ | ೧೯ |
| ದಂಡಿ ಯಾತ್ರೆ | ೨೦ |
| ಬಾಗಲಕೋಟ ಜಿಲ್ಲೆಯಲ್ಲಿ ಕಾನೂನು ಭಂಗ ಚಳವಳಿ | ೨೨ |
| ಗಾಂಧೀಜಿಯವರ ಬಂಧನ ವಿರೋಧಿಸಿ ಹರತಾಳ | ೨೨ |
| ಮೊತಿಲಾಲ್ ನೆಹರು ಬಂಧನ ವಿರೋಧಿಸಿ ಹರತಾಳ | ೨೫ |
| ಬಿಸನಾಳ ಉಪ್ಪಿನ ಸತ್ಯಾಗ್ರಹ | ೨೭ |
| ಲಾಲಾಜಿ ಪಥಕದ ವೇಳಾಪಟ್ಟಿ | ೨೯ |
| ಕಾವ್ಯಗಳಲ್ಲಿ ಸ್ವಾತಂತ್ರ್ಯ ಚಳವಳಿ | ೩೬ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೨ |

# ಬಿಸನಾಳ

## ಕಾನೂನು ಭಂಗ ಚಳವಳಿ

ಭಾರತದಲ್ಲಿ ಸ್ವಾತಂತ್ರ್ಯವನ್ನು ಗಳಿಸಲು ಅಂದು ಹಲವು ಮಾದರಿಯ ಚಳವಳಿಗಳು ನಡೆದವು. ಅವು ದೇಶದ ಹಾಗೂ ಜನತೆಯ ಒಳಿತಿಗಾಗಿ ನಡೆದವುಗಳಾಗಿವೆ. ನಾಡಿನ ಹಿರಿಯರು ಚಳವಳಿ ಮಾಡಿ ಅನೇಕ ತೊಂದರೆಗಳನ್ನು ಅನುಭವಿಸಿದ ಉದಾಹರಣೆಗಳಿವೆ. ಅಸಹಕಾರ ಚಳವಳಿಯ ನಂತರ ಕಾಂಗ್ರೆಸ್‌ನ ಮೋತಿಲಾಲ್ ನೆಹರು, ಚಿತ್ತರಂಜನದಾಸ ಮುಂತಾದ ಮುಖಂಡರು ಕಾಂಗ್ರೆಸ್‌ನಿಂದ ಹೊರ ಬಂದು ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದರು. ಇದಕ್ಕೆ ಮುಖ್ಯ ಕಾರಣವೆಂದರೆ ಗಾಂಧೀಜಿಯವರು ಅಸಹಕಾರ ಚಳವಳಿ ಹಿಂಪಡೆದಿದ್ದು, ಮತ್ತೊಮ್ಮೆ ಬೃಹತ್ ಮಟ್ಟದ ಹೋರಾಟವನ್ನು ಸಂಘಟಿಸುವ ಜವಾಬ್ದಾರಿ ಗಾಂಧೀಜಿಯವರ ಮೇಲೆ ಇತ್ತು. ರಚನಾತ್ಮಕ ಕಾರ್ಯಗಳ ಮೂಲಕ ಚಳವಳಿಗೆ ಮತ್ತೊಮ್ಮೆ ಜೀವ ತುಂಬಲು ಕಾನೂನು ಭಂಗ ಚಳವಳಿಯನ್ನು ಆರಂಭಿಸಲಾಯಿತು.

## ರಾಷ್ಟ್ರ ಮಟ್ಟದಲ್ಲಿ ಕಾನೂನುಭಂಗ ಚಳವಳಿ

### ಪೂರ್ಣ ಸ್ವರಾಜ್ಯ ಘೋಷಣೆ

ಸ್ವರಾಜ್ಯದತ್ತ ಸಾಗುವ ದಾರಿ ದುಸ್ತರವಾಗಿದೆ. ಗುರಿ ಮುಟ್ಟಲು ಸಂಘಟನೆಯ ಕುಶಲತೆ ಅವಶ್ಯವಾಗಿದೆ. ಸ್ವರಾಜ್ಯ ಪಡೆಯಲು ನಾವು ಹಳ್ಳಿಗಳನ್ನು ತಲುಪಬೇಕು. ಅಲ್ಲಿ ನಮ್ಮ ಸೇವೆ ಸಲ್ಲಿಸಿ ಸಾಮಾನ್ಯರಲ್ಲಿ ತಿಳಿವಳಿಕೆಯನ್ನು ಮೂಡಿಸಬೇಕು, ರಾಷ್ಟ್ರೀಯ ಭಾವನೆ ತಲೆದೋರುವಂತೆ ಜನರಿಗೆ ಶಿಕ್ಷಣ

ಕೊಡಬೇಕು ಎಂದು ಗಾಂಧೀಜಿಯವರು ೧೯೨೫ರ ಮೇ, ೨೧ ರ ಹರಿಜನ ಸಂಚಿಕೆಯಲ್ಲಿ ಪ್ರಕಟಿಸಿದರು ಹಾಗೂ ಚೌರಿ ಚೌರಾದಲ್ಲಿ ಆದಂತೆ ಚಳವಳಿಯನ್ನು ರದ್ದು ಮಾಡುವುದಿಲ್ಲ. ಅಥವಾ ಹಿಂತೆಗೆದುಕೊಳ್ಳುವದಿಲ್ಲ ಎಂದು ಗಾಂಧೀಜಿಯವರು ಭರವಸೆ ಕೊಟ್ಟರು.

೧೯೨೮ರ ಡಿಸೆಂಬರ್‌ನಲ್ಲಿ ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧಿಜೀಯುವರು ಪುನಃ ರಾಜಕೀಯುಕ್ಕೆ ಮರಳಿದರು. ಆಗ ರಾಷ್ಟ್ರೀಯವಾದಿಗಳು ಹಾಗೂ ಇತರ ವರ್ಗದವರನ್ನು ಒಗ್ಗೂಡಿಸಲು ಆರಂಭಿಸಿದರು. ಇದರ ಮೊದಲ ಹೆಜ್ಜೆ ಎಂದರೆ ಕಾಂಗ್ರೆಸ್‌ನ ಎಡಪಂಥಿಯ ಕ್ರಾಂತಿಕಾರಿಗಳನ್ನು ಸಮಾಧಾನಗೊಳಿಸುವುದಕ್ಕಾಗಿ ೧೯೨೯ರ ಐತಿಹಾಸಿಕ ಲಾಹೋರ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷರನ್ನಾಗಿ ಜವಹರಲಾಲ್ ನೆಹರು ಆಯ್ಕೆ ಮಾಡಿದರು. ಈ ಅಧಿವೇಶನ ಕಾಂಗ್ರೆಸ್‌ನ ಧ್ಯೇಯ 'ಪೂರ್ಣ ಸ್ವರಾಜ್ಯ' ಆಗಿರಬೇಕೆಂದು ನಿರ್ಣಯ ಮಾಡಿತು. ೧೯೨೯ ಡಿಸೆಂಬರ್ ೩೧ ರಂದು ತ್ರಿವರ್ಣ ಧ್ವಜವನ್ನು ಆರೋಹಣ ಮಾಡಲಾಯಿತು. ೧೯೩೦ ಜನೇವರಿ ೨೬ ರಂದು ಮೊದಲ ಸ್ವಾತಂತ್ರ್ಯ ದಿನವೆಂದು ಮತ್ತು ಪ್ರತಿವರ್ಷ ಆ ದಿನವನ್ನು ಜನತೆಯೊಂದಿಗೆ 'ಇನ್ನು ಮುಂದೆ ಬ್ರಿಟಿಷರ ಆಳ್ವಿಕೆಗೆ ಗುಲಾಮರಾಗಿರುವುದು ಮನುಷ್ಯ ಮತ್ತು ದೇವರ ವಿರುದ್ಧ ಅಪರಾಧ' ಎಂದು ಪ್ರತಿಜ್ಞೆಯೊಂದಿಗೆ ಆಚರಿಸಬೇಕೆಂದು ನಿರ್ಧರಿಸಲಾಯಿತು. ಕಾಂಗ್ರೆಸ್ ಅಧಿವೇಶನವು ನಾಗರಿಕ ಕಾನೂನು ಭಂಗ ಚಳವಳಿಯನ್ನು ಆರಂಭಿಸುವ ವಿಚಾರ ಪ್ರಕಟಿಸಿ ಅದರ ಜವಾಬ್ದಾರಿ ಗಾಂಧೀಜಿಯವರಿಗೆ ವಹಿಸಿಕೊಟ್ಟಿತು.

ಲಾಹೋರ ಕಾಂಗ್ರೆಸ್ ಅಧಿವೇಶನದ ನಿರ್ಣಯದಂತೆ ೧೯೩೦ ಜನವರಿ ೨೬ ರಂದು ದೇಶದ ಎಲ್ಲ ಪ್ರಮುಖ ನಗರ ಪಟ್ಟಣಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಜನರು ಸೇರಿ ಧ್ವಜಾರೋಹಣ ಮಾಡಿ ದೇಶದ ಸ್ವಾತಂತ್ರ್ಯಕ್ಕೆ ಯಾವುದೇ ತ್ಯಾಗಕ್ಕೂ ಸಿದ್ಧರಾಗಿದ್ದೇವೆ ಎಂದು ಪ್ರತಿಜ್ಞೆಗೈದರು.

ವಿಜಾಪುರದಲ್ಲಿ ೧೯೩೦ ಜನೇವರಿ ೨೬ ರಂದು ಮುಂಜಾನೆ ೮ ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಹಣಮಂತರಾಯ ಮೊಹರೆಯವರು ರಾಷ್ಟ್ರಧ್ವಜ ಹಾರಿಸಿದರು. ಅಂದು ಸಂಜೆ ೬ ಗಂಟೆಗೆ



ಹಣಮಂತರಾವ್ ಕೌಜಲಗಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರುಗಿತು. ಸಭೆಯಲ್ಲಿ ಪೂರ್ಣ ಸ್ವರಾಜ್ಯ ಗುರಿ ಸಾಧಿಸಲು ನಿರ್ಣಯಿಸಲಾಯಿತು.

ಹನಮಂತ ಜೋಶಿಯವರು ತಮ್ಮ ನೆನಪುಗಳನ್ನು ಹೀಗೆ ದಾಖಲಿಸಿದ್ದಾರೆ. ೧೯೩೦ರಲ್ಲಿ ನಾನು ವಿಜಾಪುರದಲ್ಲಿ ಮಾಧ್ಯಮಿಕ ಶಿಕ್ಷಣ ಪಡೆಯುತ್ತಲಿದ್ದೆ ಜನವರಿ ೨೬ನೇ ದಿನಾಂಕ ಶಾಲೆ ಬಿಟ್ಟು ಮರಳುವಾಗ ಟೆನಿಸ್ ಕೋರ್ಟ್‌ನಲ್ಲಿ ತುಂಬಾ ಜನರು ಸೇರಿದ್ದರು. ಕೌಜಲಗಿ ಶ್ರೀನಿವಾಸರಾಯರು ಎತ್ತರದ ದನಿಯಲ್ಲಿ ಸರಕಾರದ ನೀತಿಯನ್ನು ಖಂಡಿಸಿ ಮಾತನಾಡುತ್ತಿದ್ದರು. ರಾಷ್ಟ್ರೀಯ ಚಳವಳಿ ಪ್ರಾರಂಭವಾದಂದಿನಿಂದ ಸರಕಾರವು ಯಾವ ರೀತಿ ದಬ್ಬಾಳಿಕೆ ಹಾಗೂ ವಂಚನೆಯನ್ನು ಮಾಡುತ್ತಿದೆ ಎಂಬುದನ್ನು ಹೇಳಿದರು. ಜಲಿಯನ್‌ವಾಲಾಬಾಗ ದುರಂತವನ್ನು ಬಣ್ಣಿಸಿದರು. ಇಂದಿಲ್ಲ ನಾಳೆ ಈ ಸರಕಾರವು ಅಳಿಯಲೇಬೇಕು ಇದು ಈ ದುರಂತದ ಶಾಪವಾಗಿದೆ ಎಂದು ಹೇಳಿದರು. ಪೂರ್ಣ ಸ್ವರಾಜ್ಯವೇ ಚಳವಳಿಯ ಗುರಿಯಾಗಿ ಸತ್ಯಾಗ್ರಹವನ್ನು ನಡೆಸಬೇಕಾಗಿದೆ. ಹೈಸ್ಕೂಲ್ ಹಾಗೂ ಕಾಲೇಜ್ ವಿದ್ಯಾರ್ಥಿ ವಿದ್ಯಾರ್ಥಿನಿಯರು ಶಾಲೆ ಕಾಲೇಜುಗಳನ್ನು ಬಹಿಷ್ಕರಿಸಬೇಕೆಂದು ಕರೆ ಇತ್ತರು. ಬಾದಾಮಿ ತಾಲೂಕಿನ ಗುಳೇದಗುಡ್ಡದಲ್ಲಿ ಚಳವಳಿಗಾರರು ಮಧ್ಯಾಹ್ನ ೩ ಗಂಟೆಗೆ ಊರಲ್ಲಿ ಪ್ರಭಾತ ಫೇರಿ ಮಾಡಿದ ನಂತರ ಸಂಜೆ ೫ ಗಂಟೆಗೆ ಸಾರ್ವಜನಿಕ ಸಭೆ ಸೇರಿದರು. ಬಾಬುರಾವ್ ಬಾಸುತ್ಕರ್ ಅವರು ಸರ್ವಾನುಮತದಿಂದ ಪೂರ್ಣ ಸ್ವರಾಜ್ಯದ ನಿರ್ಣಯ ಪಾಸು ಮಾಡಿದರು.

ಬಾಗಲಕೋಟದಲ್ಲಿ ಮುಂಜಾನೆ ೮:೧೦ ನಿಮಿಷಕ್ಕೆ ಧ್ವಜ ಹಾರಿಸಿ ೧೪೦ ರೂಪಾಯಿ ಖಾದಿ ಮಾರಾಟ ಮಾಡಲಾಯಿತು. ಸಂಜೆಯ ಸಾರ್ವಜನಿಕ ಸಭೆಯಲ್ಲಿ ೨೫೦ ಜನರು ಸೇರಿದ್ದ ಪೂರ್ಣ ಸ್ವರಾಜ್ಯ ಗುರಿಯನ್ನು ನಿರ್ಣಯಿಸಿದರು.

**ಸಾಬರಮತಿ ನಿರ್ಣಯ**

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಫೆಬ್ರುವರಿ ೧೪, ೧೫ ಮತ್ತು ೧೬ರಲ್ಲಿ ಸಬರಮತಿಯಲ್ಲಿ ಸೇರಿ ಸಾಮೂಹಿಕ ಕಾಯ್ದೆಭಂಗವನ್ನು ಪ್ರಾರಂಭಿಸಲು ಮಹಾತ್ಮ ಗಾಂಧಿಯವರಿಗೆ ಅಧಿಕಾರ ನೀಡಿತು.

ಕರ್ನಾಟಕದಿಂದ ನಾ.ಸು.ಹರ್ಡೀಕರ, ಗಂಗಾಧರರಾವ್ ದೇಶಪಾಂಡೆ ಮುಂತಾದವರು ಸಬರಮತಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದರು. ಮರಳಿಬಂದ ನಂತರ ಫೆಬ್ರುವರಿ ೨೩ರಂದು ಆರ್.ಆರ್. ದಿವಾಕರ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ. ಸತ್ಯಾಗ್ರಹ ಸಮಿತಿಯನ್ನು ರಚಿಸಿದರು. ಆರ್.ಆರ್.ದಿವಾಕರ ಅವರು ವಿಜಾಪುರ ಜಿಲ್ಲೆಯಲ್ಲಿ, ಕಾರ್ನಾಡ ಸದಾಶಿವರಾಯರು ಮಂಗಳೂರು ಜಿಲ್ಲೆಯಲ್ಲಿ, ಹನಮಂತರಾವ ಕೌಜಲಗಿಯವರು ಸ್ಥಳೀಯ ನಾಯಕರಾದ ಗುಲವಾಡಿ ಮತ್ತು ತಿಮ್ಮಪ್ಪ ನಾಯಕರೊಂದಿಗೆ ಉತ್ತರ ಕನ್ನಡದಲ್ಲಿ ಪ್ರವಾಸ ಕೈಗೊಂಡು ಕಾಂಗ್ರೆಸ್‌ದ ಧ್ಯೇಯೊದ್ದೇಶಗಳನ್ನು ಜನರಿಗೆ ತಿಳಿಸಿಕೊಟ್ಟರು. ನಂತರ ೧೬-೦೩-೧೯೩೦ ರಂದು ಧಾರವಾಡದಲ್ಲಿ ನಡೆದ ಪ್ರಾಂತಿಯ ಕಾಂಗ್ರೆಸ್ ಕಮಿಟಿಯಲ್ಲಿ ತಮ್ಮ ಪ್ರವಾಸದ ವರದಿಯನ್ನು ಒಪ್ಪಿಸಿದರು.

## ದಂಡಿ ಯಾತ್ರೆ

ಗಾಂಧೀಜಿಯವರು ಕಾಯ್ದೆ ಭಂಗ ಮಾಡುವುದಕಿಂತ ಮೊದಲು ಒಟ್ಟು ೧೧ ಬೇಡಿಕೆಗಳನ್ನು ವೈಸರಾಯರ ಮುಂದೆ ಮಂಡಿಸಿದ್ದರು. ಅವು ನಿರಾಕರಿಸಲ್ಪಟ್ಟಿದ್ದರಿಂದ ಮುಂಬರುವ ಚಳವಳಿಗೆ ಚಾಲನೆ ಕೊಟ್ಟಂತಾಯಿತು. ನಂತರ ಗಾಂಧೀಜಿಯವರು ಸ್ವಲ್ಪವು ತಡವಾಡದೆ ಸತ್ಯಾಗ್ರಹದ ರೂಪರೇಷಗಳನ್ನು ಮೆಲಕು ಹಾಕುವ ಮತ್ತು ಸುತ್ತಲಿನವರಿಗೆ ಅವುಗಳನ್ನು ತಿಳಿಸಲು ಪ್ರಾರಂಭಿಸಿದರು. ಉಪ್ಪಿನ ಕರವನ್ನು ಮುರಿಯುವದನ್ನು ಮುಖ್ಯ ಗುರಿಯನ್ನಾಗಿಸಿಕೊಂಡರು. ಅದರಂತೆ ಮತ್ತು ಸತ್ಯಾಗ್ರಹದ ತತ್ವಗಳನ್ನು ಅನುಸರಿಸಿ ಮಾರ್ಚ್ ೨ನೇ ದಿನ ಸಬರಮತಿ ಆಶ್ರಮದಿಂದ ವೈಸರಾಯ್ ಇರ್ವಿನ್‌ರಿಗೆ ದೀರ್ಘ ಪತ್ರ ಬರೆದು ತಮ್ಮ ಯೋಜನೆಯನ್ನು ತಿಳಿಸಿದರು. ಹಾಗೂ ಸತ್ಯಾಗ್ರಹ ಮಾಡುವದು ನಿಲ್ಲಿಸಬೇಕಾದರೆ ಹಿಂದಿನ ಬೇಡಿಕೆಗಳನ್ನು ಒಪ್ಪಿಕೊಂಡರೆ ಮಾತ್ರ ಸಾಧ್ಯವೆಂದು ಹೇಳಿದರು. ಸಾಬರಮತಿ ಆಶ್ರಮದಲ್ಲಿದ್ದ ಇಂಗ್ಲೆಂಡ ವ್ಯಕ್ತಿ ರೆಜಿನಾಲ್ಡ ರೆನಾಲ್ಡಸ್ ಎಂಬುವವರು ಸ್ವತಃ ವೈಸರಾಯರಿಗೆ ಪತ್ರ ತಲುಪಿಸಿದರು. ಮುಂದೆ ಎರಡು ದಿನಗಳ ನಂತರ ಇದಕ್ಕೆ ನಿರಾಶದಾಯಕ ಉತ್ತರ ಬಂದಿತು. 'ರೊಟ್ಟಿ ಕೊಡಿರೆಂದು ನಾನು ಅಂಗಲಾಚಿ ಬೇಡಿಕೊಂಡೆ, ಆದರೆ ಕಲ್ಲು ಕೊಟ್ಟರು' ಎಂದು ಮಹಾತ್ಮರು ಉದ್ಗಾರ ತಗೆದರು.



ಕೂಡಲೇ ಸತ್ಯಾಗ್ರಹದ ಸಿದ್ಧತೆ ನಡೆಸಿದ ಮಹಾತ್ಮರು ಸಾಬರಮತಿಯಿಂದ ಸಮುದ್ರ ತೀರದಲ್ಲಿರುವ ದಂಡಿ ಎಂಬ ಹಳ್ಳಿಗೆ ನಡೆದುಕೊಂಡು ಹೋಗಿ ಉಪ್ಪಿನ ಕಾಯ್ದೆ ಮುರಿಯುವ ಸಿದ್ಧತೆ ಮಾಡಿದರು. ತಮಗಿಂತ ಮೊದಲು ರಾಷ್ಟ್ರದಲ್ಲಿ ಎಲ್ಲಿಯೂ ಕಾಯ್ದೆಭಂಗ ಮಾಡತಕ್ಕದಲ್ಲವೆಂದು ಕಟ್ಟಳೆ ವಿಧಿಸಿದರು. ತಮ್ಮ ಜೊತೆ ೭೮ ಸದಸ್ಯರನ್ನು ಮಾತ್ರ ಕರೆದುಕೊಂಡು ಹೋಗಲು ನಿಶ್ಚಯಿಸಿದರು.

ನಾಗರಿಕ ಕಾನೂನುಭಂಗ ಚಳವಳಿಯು ೧೯೩೦ ಮಾರ್ಚ್ ೧೨ ರಂದು ಗಾಂಧಿಯವರ ಪ್ರಸಿದ್ಧ ದಂಡಿಯಾತ್ರೆಯೊಂದಿಗೆ ಆರಂಭವಾಯಿತು. ಆಯ್ದ ೭೮ ಜನ ಅನುಯಾಯಿಗಳೊಂದಿಗೆ ಗಾಂಧಿ ಸಾಬರಮತಿ ಆಶ್ರಮದಿಂದ ದಂಡಿಯವರಗೆ ಸುಮಾರು ೩೭೫ ಕಿ.ಮೀ. ದೂರ ನಡೆದರು. ಅವರು ಹಾದು ಹೋದ ಮಾರ್ಗದಲ್ಲಿನ ಅನೇಕ ಗ್ರಾಮಗಳ ಅಧಿಕಾರಿಗಳು ತಮ್ಮ ಕೆಲಸಗಳಿಗೆ ರಾಜೀನಾಮೆ ನೀಡಿದರು. ಏಪ್ರಿಲ್ ೬ ರಂದು ದಂಡಿ ತಲುಪಿದ ಗಾಂಧೀಜಿಯವರು ಬ್ರಿಟಿಷರು ಮಾಡಿದ್ದ ಕಾನೂನುಗಳ ಅಡಿಯಲ್ಲಿ ಅಂದರೆ ಬ್ರಿಟಿಷ ಆಳ್ವಿಕೆಯಲ್ಲಿ, ಜೀವಿಸಲು ಭಾರತೀಯರು ನಿರಾಕರಿಸುತ್ತಾರೆ ಎಂಬುದರ ಸಂಕೇತವಾಗಿ ಒಂದು ಹಿಡಿ ಉಪ್ಪನ್ನು ಕೈಗೆತ್ತಿಕೊಂಡು ಕಾಯ್ದೆಭಂಗ ಮಾಡಿದರು.

ಭಾರತದಲ್ಲಿ ಬ್ರಿಟಿಷ ಆಳ್ವಿಕೆಯು ಈ ದೊಡ್ಡ ದೇಶದ ನೈತಿಕ, ಭೌತಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ವಿನಾಶವನ್ನು ತಂದಿದೆ. ಈ ಆಳ್ವಿಕೆಯನ್ನು ನಾನು ಶಾಪ ಎಂದು ಪರಿಗಣಿಸುತ್ತೇನೆ. ಇಂತಹ ಸರ್ಕಾರಿ ವ್ಯವಸ್ಥೆಯನ್ನು ನಾಶ ಮಾಡಲು ನಾನು ಹೊರಟಿದ್ದೇನೆ. ಸರಕಾರವನ್ನು ಉರುಳಿಸುವ ಸಂಚು ನನ್ನ ಧರ್ಮವಾಗಿದೆ. ನಮ್ಮದು ಅಹಿಂಸಾತ್ಮಕ ಯುದ್ಧ ನಾವು ಯಾರನ್ನೂ ಕೊಲ್ಲುವುದಿಲ್ಲ; ಆದರೆ ಈ ಸರ್ಕಾರದ ಶಾಪದ ಕಪ್ಪು ಚುಕ್ಕೆಯನ್ನು ತೊಡೆದು ಹಾಕುವದು ನಮ್ಮ ಧರ್ಮ ಎಂದು ಗಾಂಧೀಜಿಯವರು ಘೋಷಿಸಿದರು.

ಅಮರಸಿಂಗ್ ಠಾಕೂರ ಅವರು ತಮ್ಮ ಸ್ವ ಅನುಭವಗಳನ್ನು ದಾಖಲಿಸಿದಂತೆ 'ನಾನು ಜೀವರಾಜ್ ದೋಶಿ, ರಾಯಣ್ಣ ಯಂಕಂಚಿ ಮೂವರು ಆ ಯಾತ್ರೆಯಲ್ಲಿ ಪಾಲ್ಗೊಳ್ಳಬೇಕೆಂದು ನಿಶ್ಚಯಿಸಿ ರೈಲಿನಿಂದ ಸೂರತ್‌ಗೆ ೧೫ ಮೈಲು ದೂರದ ಸಾಯಿನ್ ಸ್ಟೇಷನ್ ತಲುಪಿ ಅಲ್ಲಿಂದ ನಾಲ್ಕು ಮೈಲಿ ನಡೆದು ಯಾತ್ರೆಯ ಹಾದಿಯಲ್ಲಿ ಏಡಥಾಣ ಎಂಬಲ್ಲಿ ಗಾಂಧೀಜಿಯವರನ್ನು ಕೂಡಿಕೊಂಡು ಮುಂದೆ ಮೂರು–ನಾಲ್ಕು ದಿನ ಅವರ ಯಾತ್ರೆಯ ಜೊತೆಸಾಗಿ ಅವರ ಕಾರ್ಯಕ್ರಮಗಳು, ಜನರ ಉತ್ಸಾಹ, ಗಾಂಧೀಜಿಯವರ ಭಾಷಣಗಳಿಂದ ಪ್ರಭಾವಿತರಾದೆವು. ಅವರ ಜೊತೆ ಇದ್ದ ಯಾತ್ರಿಕರಲ್ಲಿ ಮೈಲಾರ ಮಹಾದೇವಪ್ಪನವರು ಒಬ್ಬರೇ ಕನ್ನಡಿಗರು. ಗಾಂಧೀಜಿಯವರ ಜೊತೆ ಸಂಭಾಷಣೆಯು ಆಯಿತು. ಮುಂದೆ ಸಾಬರಮತಿ ಆಶ್ರಮಕ್ಕೆ ಹೋಗಿ ಅಲ್ಲಿ ಕೆಲವು ಸಾಧನಗಳನ್ನು ಕೊಂಡು ಊರಿಗೆ ಮರಳಿದೆವು. ಹೀಗೆ ಅಮರಸಿಂಗ್ ಠಾಕೂರ ಅವರು ತಮ್ಮ ಚಳವಳಿಯ ಕುರಿತು ತಿಳಿಸಿದರು.

### ಬಾಗಲಕೋಟ ಜಿಲ್ಲೆಯಲ್ಲಿ ಕಾನೂನು ಭಂಗ ಚಳವಳಿ

ದಂಡಿಯಲ್ಲಿ ಗಾಂಧೀಜಿಯವರು ಕಾನೂನು ಭಂಗ ಮಾಡಿದ ನಂತರ ಬಾಗಲಕೋಟ ಜಿಲ್ಲೆಯಲ್ಲದೇ ದೇಶದ ಹಲವು ಭಾಗಗಳಲ್ಲಿ ಕಾನೂನು ಭಂಗ ಚಳವಳಿ ಆರಂಭಗೊಂಡಿತು. ಅಂದು ಬಾಗಲಕೋಟದ ಜನರ ಮನದಲ್ಲಿ ಸಹ ರಾಷ್ಟ್ರೀಯತೆಯ ಪರಿಕಲ್ಪನೆ ಮೂಡಿ ದೇಶಕ್ಕಾಗಿ ಚಳವಳಿಯಲ್ಲಿ ಭಾಗವಹಿಸಿದ್ದಾರೆ.

### ಗಾಂಧೀಜಿಯವರ ಬಂಧನ ವಿರೋಧಿಸಿ ಹರತಾಳ

ಮೇ ೪, ೧೯೩೦ ರಂದು ಗಾಂಧೀಜಿಯವರನ್ನು ಬಂಧಿಸಿ ಪುಣೆಯ ಯರವಾಡ ಜೈಲಿನಲ್ಲಿ ಇಡಲಾಯಿತು. ಬಂಧನಕ್ಕೂ ಮುಂಚೆ ದೇಶದ ಜನತೆಗೆ ಗಾಂಧೀಜಿಯವರು ಉಪ್ಪನ್ನು ತಯಾರಿಸುವಂತೆ, ಮದ್ಯಪಾನ, ಅಫೀಮು ಹಾಗೂ ವಿದೇಶಿ ವಸ್ತ್ರಗಳ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಬೇಕು ಹಾಗೂ ಪ್ರತಿಯೊಂದು ಮನೆಯಲ್ಲಿಯೂ ನೂಲು ತೆಗೆಯಬೇಕು, ಹಿಂದೂಗಳು ಅಸ್ಪೃಶ್ಯತೆಯನ್ನು ಆಚರಿಸಕೂಡದು, ವಿದ್ಯಾರ್ಥಿಗಳು ಸರಕಾರಿ ಶಾಲೆಗಳನ್ನು ಬಹಿಷ್ಕರಿಸಬೇಕು. ಸರಕಾರಿ ನೌಕರರು ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು ಎಂದು ಕರೆ ನೀಡಿದರು. ಗಾಂಧೀಜಿಯವರ ಬಂಧನ ವಿರೋಧಿಸಿ ಜಿಲ್ಲೆಯಾದ್ಯಂತ ಹರತಾಳಗಳು ಆರಂಭಗೊಂಡವು.



ಗಲಗಲಿಯಲ್ಲಿ ಸಂಪೂರ್ಣ ಹರತಾಳ ಆಚರಿಸಲಾಯಿತು. ಸಾಯಂಕಾಲ ಜಾಹಿರ ಸಭೆಯಲ್ಲಿ ಗೋಕೆ ತಮ್ಮಣ್ಣಾಚಾರ್ಯ ಹಾಗೂ ಪಂಚ್ಚಣ್ಣವರ ಅವರ ಭಾಷಣ ಮುಗಿದ ಮೇಲೆ ವಿದೇಶಿ ಬಟ್ಟೆಗಳ ಹೋಳಿ ಆಡಲಾಯಿತು. ಗಣಿಯ ಶಂಕರ ಮತ್ತು ಹಣಮಂತ ಎಂಬುವವರು ಕುಲಕರ್ಣಿ ಹಾಗೂ ಗೌಡಕಿ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಅವರ ಸ್ಥಾನದಲ್ಲಿ ನೇಮಿಸಲ್ಪಟ್ಟ ಗೋವಿಂದಪ್ಪಾ ಚಿಕ್ಕಲಕಿ ಮತ್ತು ಶಿವಪ್ಪ ತೆಗ್ಗಿಯವರು ಸಹಿತ ರಾಜೀನಾಮೆ ನೀಡಿದರು. ಸುಬ್ಬಣ್ಣಾಚಾರ್ಯ ಗೋಕೆಯವರನ್ನು ಪಿನಲ್ ಕೋಡ ಎ.೧೧೭ ಮತ್ತು ಉಪ್ಪಿನ ಕಾಯ್ದೆ ೪೭ನೇ ಕಲಮ್‌ಗಳನ್ವಯ ಬಂಧಿಸಲಾಯಿತು.

ಇಲಕಲ್ಲದಲ್ಲಿ ನೇಕಾರರೆಲ್ಲ ಸೇರಿ ಗಾಂಧಿಯವರ ಬಂಧನ ವಿರೋಧಿಸಿ ಹರತಾಳ ಆರಂಭಿಸಿದರು. ಅಂದು ಊರಲ್ಲಿ ಒಂದು ನೇಯುವ ಶಬ್ದವು ಕೇಳಲಿಲ್ಲ. ಮಹಾತ್ಮರ ಭಾವಚಿತ್ರವನ್ನು ಊರ ತುಂಬೆಲ್ಲಾ ಮೆರೆಸಿದರು. ಕಟ್ಟಿ ಆಚಾರ್ಯರು ಹಾಗೂ ಜಹಗೀರದಾರರು ಜನರನ್ನು ಉದ್ದೇಶಿಸಿ ಮಾತನಾಡಿದರು.

೦೬–೦೫–೧೯೩೦ ರಂದು ಗುಳೇದಗುಡ್ಡದ ನಗರಸಭೆ ಹತ್ತಿರದ ಬಯಲಿನಲ್ಲಿ ಏಳು ಎಂಟು ಸಾವಿರ ಜನ ಸಭೆ ಸೇರಿ ಗಾಂಧಿಯವರ ಬಂಧನ ವಿರೋಧಿಸಿದರು. ಸಭೆಯಲ್ಲಿ ತಿಪ್ಪಣ್ಣ ಶಾಸ್ತ್ರಿಯವರು ಮಾತನಾಡಿದರು. ನಗರಸಭೆಯ ಹತ್ತಿರವಿದ್ದ ಬಯಲಿಗೆ 'ಮಹಾತ್ಮಗಾಂಧಿ ಚೌಕ' ಎಂದು ಹೆಸರಿಡಲು ಬಾಸೂತ್ಕರ್ ಅವರು ಸೂಚಿಸಿದಾಗ ಸಭೆಯ ಒಮ್ಮತದಿಂದ ಅದನ್ನು ಒಪ್ಪಿತು.. ಬೀಳಗಿಯಲ್ಲಿ ಅಂಗಡಿಗಳನ್ನು ಮುಚ್ಚಿ ಸಂಜೆಯವರೆಗೂ ಮಹಾತ್ಮರ ಭಾವಚಿತ್ರವನ್ನು ಮೆರವಣಿಗೆಗೆ ಮಾಡಿ ವೀರಶೈವರು ಖಾದಿ ಧರಿಸುವಂತೆ ನಿಶ್ಚಯಿಸಿದರು.

ಹುನಗುಂದದ ನಾಗರಿಕರು ೦೬–೦೫–೧೯೩೦ ರಂದು ಹರತಾಳ ಆರಂಭಿಸಿ ಎಲ್ಲ ಗಿರಿಣಿ, ಮೋಟಾರ, ಅಂಗಡಿಗಳನ್ನು ಬಂದ್ ಮಾಡಿದರು.

ಅಬಾಲವೃದ್ಧರು, ಸಾಹುಕಾರರು ಸ್ತ್ರೀಯರು ಹರತಾಳದಲ್ಲಿ ಭಾಗವಹಿಸಿದರು. ರಾಜವ್ವಳೆಂಬ ವೇಶ್ಯೆಯೊಬ್ಬಳು ಪ್ರತಿ ಅಂಗಡಿಗೆ ಹೋಗಿ ಬಂದ್ ಮಾಡಿಸಿದಳು. ಸಾಯಂಕಾಲ ಮಹಾತ್ಮ ಗಾಂಧೀಜೀಯವರ ಭಾವಚಿತ್ರದ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಮಧ್ವರಾವ್ ಪ್ಯಾಟಿಯವರು ಭಾಷಣ ಮಾಡಿದರು. ಸಭೆಯಲ್ಲಿ ೫೦ ಉಪ್ಪಿನ ಚೀಟಿಗಳು ಮಾರಲ್ಪಟ್ಟವು.

ವಿಜಾಪುರದ ನಗರಸಭೆಯಲ್ಲಿ ಸಭೆ ನಡೆದಾಗ ಮಹಾತ್ಮರ ಬಂಧನದ ಸಂದೇಶ ಬಂದಿತು. ಆಗ ಸಭೆಯನ್ನು ಸದಸ್ಯರು ರದ್ದುಗೊಳಿಸದೆ ಇದ್ದಾಗ ಅವರ ವಿರುದ್ಧ ಸಾರ್ವಜನಿಕರು ಅವಿಶ್ವಾಸ ಗೊತ್ತುವಳಿ ಹೊರಡಿಸಿದರು. 'ಸಭೆಯು ನಡೆದ ಸಮಯದಲ್ಲಿ ಮಹಾತ್ಮರ ಗೌರವಾರ್ಥವಾಗಿ ಸಭೆಯನ್ನು ರದ್ದುಗೊಳಿಸಬೇಕೆಂಬ ಸೂಚನೆಯು ಬಂದಾಗ ೫ ಮತಗಳು ಪರ ಹಾಗೂ ೭ ಮತಗಳು ವಿರುದ್ಧ ಬಿದ್ದು ನಿರಾಕರಿಸಲ್ಪಟ್ಟಿತು. ಸದಸ್ಯರು ಸಭೆಯನ್ನು ನಿಲ್ಲಿಸದಿರಲು ನಿರ್ಧರಿಸಿದರು. ಇದನ್ನು ವಿರೋಧಿಸಿದ ನೌಕರರು ತಾವು ಕಛೇರಿಗೆ ಬರುವದಿಲ್ಲವೆಂದು ಅರ್ಜಿ ಬರೆದು ಕರ್ತವ್ಯಕ್ಕೆ ಹಾಜರಾಗಲಿಲ್ಲ. ನಗರಸಭೆಯು ಅಂಗಡಿಯವರ ನೇತೃತ್ವದಲ್ಲಿ ಸಭೆ ಸೇರಿ ನೌಕರರಿಗೆ ಕ್ಷಮೆ ಬೇಡಲು ಕೇಳಿಕೊಂಡರು. ಕುಲಕರ್ಣಿ ಗೋವಿಂದರಾಯರು ಕ್ಷಮೆ ಕೇಳುವದನ್ನು ನಿರಾಕರಿಸಿದ್ದರಿಂದ ಅವರಿಗೆ ಎರಡು ರೂಪಾಯಿ ದಂಡ ವಿಧಿಸಿದರು. ಕರ್ತವ್ಯ ತಪ್ಪಿಸಿದ ದಿನ ನೌಕರರಿಗೆ ಸಂಬಳವಿಲ್ಲವೆಂದು ಗೊತ್ತುವಳಿ ಮಾಡಿತು. ಇದನ್ನು ವಿರೋಧಿಸಿದ ವಿಜಾಪುರದ ನಾಗರಿಕರು ಸಾರ್ವಜನಿಕ ಸಭೆಯನ್ನು ಧನಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿಸಿ ನಗರಸಭೆಯ ಮೇಲೆ ತಮ್ಮ ವಿಶ್ವಾಸವಿಲ್ಲವೆಂದು ಈಗಿದ್ದ ಸಭಾಸದರು ತಮ್ಮ ನಿಜವಾದ ಪ್ರತಿನಿಧಿಗಳಲ್ಲ ಹಾಗೂ ತಕ್ಷಣವೇ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಜಮಖಂಡಿ ಸಂಸ್ಥಾನದಲ್ಲಿ ಗಾಂಧಿಯವರ ಬಂಧನದ ದಿನವನ್ನು ಗಾಂಧಿದಿನವನ್ನಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳು ಮುಂಜಾನೆ ನಗರ ಸಂಕೀರ್ತನೆ ಮುಗಿಸಿದ ನಂತರ ಶಾಲೆಗೆ ತೆರಳಿ ಪಿಕೆಟಿಂಗ್ ಮಾಡಿದರು. ಯಾರೊಬ್ಬರು ಶಾಲೆಯೊಳಗೆ ಕಾಲಿಡಲಿಲ್ಲ. ಶಾಲೆ ಬಾಗಿಲುಗಳಿಗೆ ಕೀಲಿ ಹಾಕಿದರು. ಸಂಜೆ ದ್ವಾರಕನಾಥ ದೇವಾಲಯದಲ್ಲಿ ಸಾರ್ವಜನಿಕರ ಸಭೆ ಸೇರಿ



ಬಾಬುರಾಯರು ಭಾಷಣ ಮಡಿದ ನಂತರ ಪರದೇಶಿ ಬಟ್ಟೆಗಳನ್ನು ಸುಟ್ಟರು. ಬಾಗಲಕೋಟೆಯ ಜನರು ಗಾಂಧಿ ಬಂಧನ ವಿರೋಧಿಸಿ ಬೃಹತ್ ಪ್ರತಿಭಟನೆ ನಡೆಸಿದರು. ಲಕ್ಷ್ಮೀಚಿತ್ರ ಮಂದಿರ ಹಾಗೂ ದತ್ತಾತ್ರೇಯ ನಾಟ್ಯ ಸಂಘದವರು ಪ್ರದರ್ಶನವನ್ನು ನಿಲ್ಲಿಸಿ ಹರತಾಳದಲ್ಲಿ ಭಾಗವಹಿಸಿದರು ಶೆಟ್ಟರು (ವ್ಯಾಪಾರಸ್ಥರು) ಎಲ್ಲರೂ ಕೂಡಿ ಸಂಪೂರ್ಣ ಹರತಾಳ ಕೈಗೊಂಡಿರುವದನ್ನು ಬೆಂಬಲಿಸಲು ನಿರ್ಣಯಿಸಿದರು. ಹೀಗೆ ಬಾಗಲಕೋಟದ ಜನರು ದೇಶದ ಒಳಿತಿಗಾಗಿ ಮಹತ್ವದ ಸೇವೆ ಸಲ್ಲಿಸಿದ್ದಾರೆ.

## ಮೋತಿಲಾಲ್ ನೆಹರು ಬಂಧನ ವಿರೋಧಿಸಿ ಹರತಾಳ

ಅಖಿಲ ಭಾರತ ಕಾಂಗ್ರೆಸ್‌ನ ಅಧ್ಯಕ್ಷರಾದ ಮೋತಿಲಾಲ್ ನೆಹರು ಅವರನ್ನು ಬಂಧಿಸಿದಾಗ ದೇಶದಾದ್ಯಂತ ಹರತಾಳಗಳು ಆರಂಭಗೊಂಡವು. ಅದರಂತೆ ವಿಜಾಪೂರ ಜಿಲ್ಲಾ ಕಾಂಗ್ರೆಸ್‌ದ ನಿರ್ಣಯದಂತೆ ಬಾಗಲಕೋಟದ ಸತ್ಯಾಗ್ರಹ ಮಂಡಳಿಯು ೦೨-೦೭-೧೯೩೦ ರಂದು ಕನ್ನಡಿಗ ಪತ್ರಿಕೆಯಲ್ಲಿ ಹರತಾಳ ಪಾಲಿಸಿರಿ ಎಂದು ಹೀಗೆ ಪ್ರಕಟಣೆ ನೀಡಿತು.

ರಾಷ್ಟ್ರೀಯ ಮಹಾಸಭೆಯ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾದ ಪಂಡಿತ ಮೋತಿಲಾಲ್ ನೆಹರು ಅವರನ್ನು ಸರಕಾರ ಸೆರೆ ಹಿಡಿದುಕೊಂಡು ಹೋಗಿ ಉಡಿಯಲಿ ಮತ್ತೆ ಕೆಂಡವನ್ನು ಕಟ್ಟಿಕೊಂಡು ತಮ್ಮ ಮುತ್ಸದ್ದಿತನದ ದಿವಾಳಿಯನ್ನು ಹೊರಗೆಡವಿದ್ದಾರೆ. ಸರಕಾರದ ದಬ್ಬಾಳಿಕೆಗೆ ಸರಿಯಾದ ಉತ್ತರವನ್ನು ಕೊಡುವದು ಪ್ರತಿಯೊಬ್ಬ ಭಾರತೀಯನಿಗೆ ಬಿಡಲಾರದ ಕರ್ತವ್ಯವಾಗಿದ್ದರಿಂದ ಅಲಹಬಾದ, ಮುಂಬಯಿ, ದಿಲ್ಲಿ ಮೊದಲಾದ ದೊಡ್ಡ ದೊಡ್ಡ ಪಟ್ಟಣದವರು ಈ ಬಗ್ಗೆ ಹರತಾಳ ನಡೆಸಿ ತಮ್ಮ ನಿಷೇಧವನ್ನು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಅದರಂತೆ ಕರ್ನಾಟಕದ ಗಂಡು ಮೆಟ್ಟಿನ ಸ್ಥಳವೆಂದೆನಿಸಿಕೊಳ್ಳುವ ಬಾಗಲಕೋಟೆಯವರಾದ ನಾವು ಇಂದು ಹರತಾಳವನ್ನು ಪಾಲಿಸಿ ತಾವು ಭಾರತೀಯರಿದ್ದೇವೆ ಎಂಬುದನ್ನು ವ್ಯಕ್ತಪಡಿಸಬೇಕಾಗಿದೆ. ಆದುದರಿಂದ ವಿದ್ಯಾರ್ಥಿಗಳೇ ಇಂದು ಶಾಲೆಗೆ ಶರಣು ಹೊಡೆಯಿರಿ. ವರ್ತಕರೇ ಇಂದು ನಿಮ್ಮ ನಿಮ್ಮ ಅಂಗಡಿಗಳಿಗೆ ಕೀಲಿಗಳನ್ನು ಜಡಿದು ವ್ಯವಹಾರವನ್ನು

ನಿಲ್ಲಿಸಿ ಬಿಡಿರಿ, ಸಿನಿಮಾ, ನಾಟಕ ಚಹಾ, ಫರಾಳದ ಅಂಗಡಿ ಮೊದಲಾದ ಇನ್ನಿತರ ಉದ್ಯೋಗಿಗಳನ್ನು ಕೈಕೊಂಡವರೇ. ಇಂದು ನಿಮ್ಮ ನಿಮ್ಮ ಉದ್ಯೋಗಗಳನ್ನು ಮಾಡಬೇಡಿರಿ, ಹಿಂದೂ ಸ್ಥಾನದಲ್ಲಿಯೇ ಹುಟ್ಟಿ, ಹಿಂದೂಸ್ಥಾನದಲ್ಲಿಯೇ ಬೆಳದು, ಹಿಂದೂ ಸ್ಥಾನದಲ್ಲಿಯೇ ಮಣ್ಣುಪಾಲಾಗಿ ಹೋಗುವರಾದ ನಾವು ನಮ್ಮ ತನುಮನ ಧನಗಳನ್ನೆ ರಾಷ್ಟ್ರಕ್ಕೆ ಧಾರೆಯರೆದ ಜನಪದ ಚಕ್ರವರ್ತಿಗಳಿಗಾಗಿ ಇಷ್ಟೋ ಮಾಡದಿದ್ದರೆ ಹಿಂದೂಗಳನ್ನೆಸಿಕೊಳ್ಳಲು ಅರ್ಹರೇ ಆಗುವದಿಲ್ಲ, ಆದ್ದುದರಿಂದ ಬಾಗಲಕೋಟೆಯ ನಾಗರಿಕರೇ ಎದ್ದೇಳಿರಿ ಇದು ನಿಮ್ಮ ಎಲ್ಲ ವ್ಯವಹಾರಗಳನ್ನು ಬದಿಗಿಟ್ಟು ಹರತಾಳವನ್ನು ಯಶಸ್ವಿಯಾಗಿ ಮಾಡಿರಿ ಮತ್ತು ಸಂಜೆಗೆ ಲಾಲಾಜಿ ಬೈನಲ್ಲಿ ಈ ಬಗ್ಗೆ ಸೇರುವ ಸಭೆಗೆ ತಂಡ ತಂಡವಾಗಿ ಬಂದು ನಿಷೇಧಕ್ಕೆ ಬೆಂಬಲವನ್ನು ಕೊಡಿರಿ ಎಂದು ವಿನಂತಿಸಿಕೊಂಡಿತು.

ಗಲಗಲಿಯಲ್ಲಿ ೦೩–೦೭–೧೯೩೦ ರಂದು ಮೋತಿಲಾಲ ನೆಹರು ಮತ್ತು ಡಾ॥ ಸೈಯ್ಯದ ಅಹಮ್ಮದ್ ಅವರ ಬಂಧನವನ್ನು ಖಂಡಿಸಿ ಊರಲೆಲ್ಲಾ ಸಂಪೂರ್ಣ ಹರತಾಳ ಆಚರಿಸಲ್ಪಟ್ಟಿತು. ಅಂದು ಚಹಾದ ಅಂಗಡಿಗಳು ಮುಚ್ಚಿದ್ದಿರಿಂದ ಪೋಲೀಸರಿಗೆ ಒಂದು ಗುಟುಕ ಚಹಾ ಸಿಗಲಿಲ್ಲ. ಉದ್ಯೋಗಸ್ಥರು, ವ್ಯಾಪರಸ್ಥರು ತಮ್ಮ ವ್ಯವಸಾಯವನ್ನು ನಿಲ್ಲಿಸಿ ಬಿಟ್ಟರು. ಮಹಿಳೆಯರು ಶಾಲೆಗಳ ಮುಂದೆ ಪಿಕೆಟಿಂಗ್ ಮಾಡಿದರು. ಸಾಯಂಕಾಲ ಶಂಕರರಾವ್ ಪಂಡಿತ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ನಾಗೇಶ ಭಟ್ಟರು ಮೋತಿಲಾಲ ನೆಹರು ಮತ್ತು ಡಾ॥ ಸೈಯ್ಯದ ಅಹಮ್ಮದ ಅವರ ಕುರಿತು ಅಭಿನಂದನ ಪರ ಭಾಷಣ ಮಾಡಿದರು. ಸರಕಾರ ದಬ್ಬಾಳಿಕೆಯ ನಿಷೇಧವೆಂದು ಚಿಕ್ಕ ಬಾಲಕರು ೫ ರಾಟಿಗಳನ್ನು ಬಿಟ್ಟು ಬಿಡದೆ ನಡೆಸಬೇಕೆಂದು ನಿಶ್ಚಯಿಸಿ ಮುಂಜಾನೆಯಿಂದ ಸಂಜೆಯವರೆಗೆ ನೂಲನ್ನು ತೆಗೆದರು.

ಸತ್ಯಾಗ್ರಹದ ಮುಖಂಡರನ್ನು ಸರಕಾರ ಸೆರೆಯಲ್ಲಿಟ್ಟು ಸತ್ಯಾಗ್ರಹವನ್ನು ನಿಲ್ಲಿಸಲು ಸಂಚು ರೂಪಿಸಿರುವದನ್ನು ಖಂಡಿಸಿ ಕೌಜಲಗಿ ಹಣಮಂತ ರಾಯರು ಜನಸಾಮಾನ್ಯರು ನಾಯಕರಾಗಿ ಸತ್ಯಾಗ್ರಹ ಮುಂದುವರೆಸಲು ಕರೆ ನೀಡಿದರು. 'ಮುಂದಾಳುಗಳನ್ನು ಹಿಡಿದು ಹಾಕಿದರೆ ಸತ್ಯಾಗ್ರಹಿಗಳು ಮಾರ್ಗದರ್ಶಕರಿಲ್ಲದಂತಾಗಿ ಚಳವಳಿಯನ್ನು ಸಾಗಿಸಲಾರರೆಂದು ಸರಕಾರವು ಅಶೀಸುತ್ತದೆ. ಆದರೆ ನನ್ನ ಎಲ್ಲ ಸಮರ ಸಹಪಾಠಿಗಳಿಗೆ ನಾನು ಹೇಳುವದೇನೆಂದರೆ, ಇನ್ನು ಮುಂದೆ ಮುಖಂಡರೂ ನೀವೇ, ಸೈನಿಕರೂ ನೀವೇ ಎಂದು ಹೊಣೆ ಹೊತ್ತು ಮುಂದೆ ಸಾಗಿರಿ ಮಹಾತ್ಮರ ಈ ಚಳವಳಿಯು ಸರಳವೂ ಸ್ಪಷ್ಟವೂ ಆಗಿದೆ. ಅದಕ್ಕಾಗಿ ಮುಖಂಡರ ಅವಶ್ಯಕತೆಯೇ ಇಲ್ಲ. ಶಾಂತಿಯೊಂದೇ ಅವಶ್ಯಕವಾಗಿ ಬೇಕಾಗಿರುವದು ಎಂದು ಹೇಳಿದರು.



### ಬಿಸನಾಳ ಉಪ್ಪಿನ ಸತ್ಯಾಗ್ರಹ

ಉಪ್ಪಿನ ಸತ್ಯಾಗ್ರಹ – ದುಷ್ಟ ಮತ್ತು ಅನ್ಯಾಯದ ಕಟ್ಟಳೆಗಳನ್ನು ಸವಿನಯವಾಗಿ ಮುರಿದು ಕಷ್ಟಗಳನ್ನು ಸಹಿಸಲು ಸಿದ್ಧರಾಗುವದೇ ಸತ್ಯಾಗ್ರಹವೆನಿಸುವದು. ಉಪ್ಪಿನ ಸತ್ಯಾಗ್ರಹವನ್ನು ಈ ಕೆಳಕಂಡ ರೀತಿಯಲ್ಲಿ ಮಾಡಲು ಅವಕಾಶಗಳಿವೆ.

೧. ಸರಕಾರಕ್ಕೆ ಕರ ಕೊಡದೆ ಉಪ್ಪನ್ನು ತಯಾರಿಸಬಹುದು.

೨. ಅಂಥಹ ಉಪ್ಪನ್ನು ಎತ್ತಿ ಒಯ್ದು ಎರಡನೆಯವರಿಗೆ ಕೊಡಬಹುದು ಇಲ್ಲವೆ ಮಾರಬಹುದು.

೩. ತನ್ನಷ್ಟಕ್ಕೆ ತಾನೇ ಸಮುದ್ರದಡದಲ್ಲಿ ಆದ ಉಪ್ಪನ್ನು ಕರ ಕೊಡದೆ ಎತ್ತಿ ತರಬಹುದು.

೪. ಅದನ್ನು ಮಾರಬಹುದು.

೫. ಉಪ್ಪಿನ ಮಣ್ಣನ್ನು ಕರ ಕೊಡದೆ ಒಯ್ಯುವದು.

೬. ಸರಕಾರದ ಮಾಲ್ಕಿಯ ಉಪ್ಪನ್ನು ತೆಗೆದುಕೊಂಡು ಬರಬಹುದು.

೭. ಇವುಗಳಲ್ಲಿ ಯಾವುದಾದರೂ ಒಂದನ್ನು ಮಾಡಲು ಯತ್ನಿಸುವದು.

ಇವೆಲ್ಲವುಗಳನ್ನು ಮಾಡಿದರೆ ಗುನ್ಹೆಗಳೆ ಅಗುವವು. ಆದರೆ ಸತ್ಯಾಗ್ರಹಿಯ ಈ ಕಾರ್ಯವನ್ನು ನಾನು ಮಾಡುವೆನೆಂದು ಮೊದಲು ಅಧಿಕಾರಿಗಳಿಗೆ ತಿಳಿಸಿ ಇದು ಗುನ್ಹೆ ಅಲ್ಲ ಇದು ನನ್ನ ನೈತಿಕ ಕರ್ತವ್ಯ ಎಂದು ಸಾರಿ ಆ ಮೇಲೆ

ಸತ್ಯಾಗ್ರಹ ಮಾಡಬೇಕು, ಇಲ್ಲದಿದ್ದರೆ ಕಳ್ಳತನದಿಂದ ಹೊಟ್ಟೆ ಪಾಡಿಗಾಗಿ ಉಪ್ಪು ಮಾಡುವವನಗೂ ಸತ್ಯಾಗ್ರಹಿಗೂ ಭೇದವೆ ಉಳಿಯುವದಿಲ್ಲ.

ಸಾಮೂಹಿಕ ಶಾಸನ ಭಂಗವನ್ನು ವಿಜಾಪೂರ ಜಿಲ್ಲೆಯ ಯಾವುದಾದರೊಂದು ಸ್ಥಳದಲ್ಲಿ ಕೈಗೊಳ್ಳಬೇಕೆಂದು ಜಿಲ್ಲೆಯ ಯುದ್ಧ ಮಂಡಳದವರು ಬಾಗಲಕೋಟದಲ್ಲಿ ಸಭೆ ಸೇರಿ ನಿರ್ಣಯಿಸಿದರು. ಮಂಡಳದ ಅಧ್ಯಕ್ಷರಾದ ಹಣಮಂತರಾವ್ ಮೊಹರೆಯವರು ಗಲಗಲಿಯ ಸಮೀಪವಿದ್ದ ಬಿಸನಾಳ ಗ್ರಾಮವನ್ನು ಆಯ್ಕೆ ಮಾಡಿಕೊಂಡರು.

ಬಾಗಲಕೋಟ ಸ್ವಾತಂತ್ರ್ಯ ಹೋರಾಟಗಾರರಾದ ಎನ್.ಆರ್. ಮಳಗಿಯವರು ತಮ್ಮ ಸತ್ಯಾಗ್ರಹವನ್ನು ನೆನಪನ್ನು ದಾಖಲಿಸಿದಂತೆ ಬಾಗಲಕೋಟದಿಂದ ೨೦ಮೈಲು ದೂರದ ಬಿಸನಾಳ ಹಳ್ಳದಲ್ಲಿ ಹಿಂದೆ ಉಪ್ಪು ತಯಾರಿಸುತ್ತಿದ್ದರು. ಇದನ್ನೆ ಸತ್ಯಾಗ್ರಹದ ಸ್ಥಳವೆಂದು ಆರಿಸಲಾಯಿತು. ಕೃಷ್ಣ ಪದಕಿಯವರನ್ನು ಡಾ॥ ಹರ್ಡೀಕರವರು ಈ ಕೆಲಸದ ನಾಯಕರನ್ನಾಗಿ ಆರಿಸಿ ಬಾಗಲಕೋಟದ ಹತ್ತು ತರುಣರನ್ನು ಅವರ ಜೊತೆ ಕಳುಹಿಸಿದರು. ಅಲ್ಲಿ ಗೋಲಿಬಾರ ಕೂಡಾ ಆದೀತೆಂದು ಡಾಕ್ಟರರು ಎಚ್ಚರಿಸಿದ್ದರು. ಯಾವದಕ್ಕೂ ಹಿಂಜರಿಯದ ತರುಣರು ಮೂರು ತಿಂಗಳ ಕಾಲ ಉಪ್ಪಿನ ಸತ್ಯಾಗ್ರಹ ಶಿಬಿರ ನಡೆಸಿದರು.

ವಿಜಾಪೂರ ಜಿಲ್ಲೆಯ ಸತ್ಯಾಗ್ರಹಿಗಳ ಮೊದಲನೆ(ಲಾಲಾಜಿಯವರ) ಪಥಕವು ಉಪ್ಪಿನ ಸತ್ಯಾಗ್ರಹಕ್ಕಾಗಿ ಬಿಸನಾಳಕ್ಕೆ ಹೋಗಲು ನಿರ್ಧರಿಸಿದ್ದು ತಾಲೂಕಾ ಕಾಂಗ್ರೆಸ್ ಕಮಿಟಿಯು ಅದರ ಜಾಹೀರಾತನ್ನು ಕನ್ನಡಿಗ ಪತ್ರಿಕೆಯಲ್ಲಿ ಹೀಗೆ ಪ್ರಕಟಿಸಿತು.

ಬಿಸನಾಳಿಗೆ ನಡೆದು ಹೋಗುವ ಮಾರ್ಗ ವಿಜಾಪೂರ ಜಿಲ್ಲೆಯ ಮಂಡಳವು ನಿಶ್ಚಯಿಸಿದ ಪ್ರಕಾರ ಮೊದಲನೆ ಪಥಕವು ತಾರೀಖು: ೦೫–೦೫–೧೯೩೦ರಂದು ಮುಂಜಾನೆ ಬಾಗಲಕೋಟಯಿಂದ ಕೆಳಗೆ ನೀಡಿದ ಊರುಗಳಲ್ಲಿ ಪ್ರಚಾರ ಕಾರ್ಯ ಮಾಡುತ್ತಾ ಬಿಸನಾಳಿಗೆ ಹೋಗುವುದು.



## ಲಾಲಾಜಿ ಪಥಕದ ವೇಳಾಪಟ್ಟಿ

| ದಿನಾಂಕ | ಹೊರಡುವ ವೇಳೆ | ಮುಟ್ಟುವ ವೇಳೆ | ಯಾವ ಊರಿಗೆ | ಪ್ರತಿದಿನ ಪ್ರಯಾಣ ಮೈಲು |
|---|---|---|---|---|
| ೦೫/೦೫/೧೯೩೦ | ಬಾಗಲಕೋಟೆಯಿಂದ ಮುಂಜಾನೆ ೮ ಗಂಟೆಗೆ | ೧೦ ಗಂಟೆಗೆ | ಗದ್ದನಕೇರಿ | |
| | ಸಾಯಂಕಾಲ ೭ ಗಂಟೆಗೆ | ೭ ಗಂಟೆಗೆ | ಅನಗವಾಡಿ | ೧೦ ಮೈಲು |
| ೦೬/೦೫/೧೯೩೦ | | ಮುಂಜಾನೆ ೧೦ ಗಂಟೆಗೆ | ಬೂದಿಹಾಳ,ಬಾವಲತ್ತಿ, ಕುಂದರಗಿ,ಕಾತರಕಿ | ೬ ಮೈಲು |
| | | ಸಂಜೆ ೭ ಗಂಟೆಗೆ | ಕೊಪ್ಪ, ಆಲಗುಂಡಿ | ೫ ಮೈಲು |
| ೦೭/೦೫/೧೯೩೦ | | ಮದ್ಯಾಹ್ನ, ಸಾಯಂಕಾಲ | ಅರಕೇರಿ, ಬೀಳಗಿ | ೬ ಮೈಲು ೮ ಮೈಲು |
| ೦೮/೦೫/೧೯೩೦ | | ಮದ್ಯಾಹ್ನ, ಸಾಯಂಕಾಲ | ಸೊನ್ನ, ಸಿದ್ದಾಪೂರ | ೬ ಮೈಲು ೪ ಮೈಲು |
| ೦೯/೦೫/೧೯೩೦ | | ಮದ್ಯಾಹ್ನ, ಸಾಯಂಕಾಲ | ತೆಗ್ಗಿ,ಬಾಡಗಿ ಗಲಗಲಿ | ೬ ಮೈಲು ೬ ಮೈಲು |
| ೧೦/೦೫/೧೯೩೦ | | ಮುಂಜಾನೆ ೮ ಗಂಟೆಗೆ | ಬಿಸನಾಳ | ೪ ಮೈಲು |
| | | | **ಒಟ್ಟು** | **೬೧ ಮೈಲು** |

ಬಿಸನಾಳಗೆ ಹೊರಟ ಸತ್ಯಾಗ್ರಹಿಗಳ ಮೊದಲನೆ ಪಥಕಕ್ಕೆ ಬಾಗಲಕೋಟದಲ್ಲಿ ಅದ್ದೂರಿಯಾಗಿ ಬೀಳ್ಕೊಡಲಾಯಿತು. ಬಿಸನಾಳ ಉಪ್ಪಿನ ಸತ್ಯಾಗ್ರಹಕ್ಕೆ ತೆರಳಬೇಕಾದ ಪಥವು ಮುಂಜಾನೆ ಬಾಗಲಕೋಟೆ ಯಿಂದ ಹೊರಟಿತು. ಬೆಳಗಿನ ಆರು ಗಂಟೆಯ ಪ್ರಶಾಂತ ಸಮಯದಲ್ಲಿ ಧ್ವಜ ವಂದನೆಯನ್ನು ಮಾಡಿ ೧೨ ಸ್ವಯಂ ಸೇವಕರ ಪಥಕವು ಸೇವಾದಳದಲ್ಲಿರುವ ಶಿಕ್ಷಣದ ಶಿಬಿರದಿಂದ ಹೊರಟಿತು. ಊರೊಳಗಿನ ಬೀದಿಗಳಲ್ಲಿ ಹಾಯ್ದು ಗದ್ದನಕೇರಿಯ ಮಾರ್ಗವಾಗಿ ಪ್ರಯಾಣ ಬೆಳೆಸಿತು. ಊರ ನಾಗರಿಕರು ತಮ್ಮ ಮನೆ ಅಂಗಡಿಗಳ ಮುಂದೆ ಬೀದಿಗಳಲ್ಲಿ ತಳಿರು ತೋರಣಗಳಿಂದ ಅಲಂಕರಿಸಿದ್ದಲ್ಲದೆ. ಓಣಿಗಳಲ್ಲಿ ಕಸಗೂಡಿಸಿ ಥಳಿ ಹೊಡೆದು ರಂಗವಲ್ಲಿಗಳಿಂದ ಅಲಂಕರಿಸಿ ಹಬ್ಬದ ವಾತಾವಣರವನ್ನು ನಿರ್ಮಿಸಿದರು. ಜನರು ಉತ್ಸಾಹ ಭರಿತವಾಗಿ ಸತ್ಯಾಗ್ರಹಿ ತಂಡವನ್ನು ಹಿಂಬಾಲಿಸುತ್ತಿದ್ದರು. ಮೆರವಣಿಗೆ ಮುಂದೆ ಸಾಗಿದಂತೆ ಹಿಂಬಾಲಿಸುವ ಜನರ ಸಂಖ್ಯೆ ಅಧಿಕವಾದರೂ ಶಿಸ್ತಿನಲ್ಲಾಗಲಿ, ಶಾಂತತೆಯಲ್ಲಾಗಲಿ, ಗಾಂಭಿರ್ಯದಲ್ಲಾಗಲಿ ನ್ಯೂನ್ಯತೆ ಉಂಟಾಗಲಿಲ್ಲ. ಅಲ್ಲದೆ ಎಲ್ಲರ ಮೊರೆಯ

ಮೇಲೆ ಮಹಾತ್ಮರು ಕೈಗೊಂಡಿರುವ ಶಾಂತಿ ಯುದ್ಧದ ಗಂಭೀರ ವೃತ್ತಿಯ ಭಾವನೆಯು ಒಡೆದು ಕಾಣುತ್ತಿತ್ತು. ಸುಮಂಗಲೆಯರಾದ ಗೃಹಿಣಿಯರು ತಮ್ಮ ತಮ್ಮ ಮನೆಗಳ ಮುಂದೆ ಈ ಸತ್ಯಾಗ್ರಹಿಗಳಿಗೆ ಅರಿಶಿನ ಕುಂಕುಮ, ಗಂಧ ಮಂಗಲ ದ್ರವ್ಯಗಳಿಂದ ಆರತಿ ಅಕ್ಷತೆಗಳೊಂದಿಗೆ ವೀರರ ಹಣೆಗೆ ಕುಂಕುಮವನ್ನು ಇಟ್ಟು ಹೂ ಹಾರಿಸಿ ಸಮರದಲ್ಲಿ ವಿಜಯಶಾಲಿಗಳಾಗಿ ಬನ್ನಿರೆಂದು ಬೀಳ್ಕೊಟ್ಟರು. ಇದೇ ಸಮಯದಲ್ಲಿ ಜವಳಿ ವ್ಯಾಪಾರಸ್ಥರು ತಮ್ಮ ಸಂಘದ ವತಿಯಿಂದ ೨೫ ರೂಪಾಯಿ ದೇಣಿಗೆ ಕೊಟ್ಟರು. ಅನೇಕರು ಉದಾರ ಹಸ್ತದಿಂದ ದಾನ ಮಾಡಿದರು. ಸತ್ಯಾಗ್ರಹಿ ಪಥಕದ ಮುಖ್ಯಸ್ಥನಿಗೆ ಸೇನಾಪತಿ ಎಂದು ಕರೆಯುತ್ತಿದ್ದರು.

ಸತ್ಯಾಗ್ರಹಿಗಳ ಪ್ರಥಮ ಪಥಕದ ವರದಿಯಲ್ಲಿ ಸೇನಾಪತಿಯು ತಾವು ಕ್ರಮಿಸಿದ ದೂರ ಹಾಗೂ ಸ್ಥಳಗಳ ಬಗ್ಗೆ ವರದಿ ಮಾಡಿದ್ದಾರೆ. ಕುಂದರಗಿಯಿಂದ ಬುಧವಾರ ತಾರೀಖು:೦೭-೦೫-೧೯೩೦ರಂದು ಮುಂಜಾನೆ ೭ಗಂಟೆಗೆ ಮೆರವಣಿಗೆಯೊಂದಿಗೆ ಹೊರಟೆವು, ಅಲ್ಲಿಂದ ಬಾವಲತ್ತಿಗೆ ಬಂದೆವು. ಇಲ್ಲಿಯ ಜನರು ಕೊಂಚ ಮಟ್ಟಿಗೆ ಉತ್ಸಾಹವನ್ನು ತೋರಿಸಿದ್ದರು. ವ್ಯಾಖ್ಯಾನವಾದ ನಂತರ ಪ್ರಮಾಣ ಬೆಳೆಸಿದೆವು. ಸಂಜೆ ೭ ಗಂಟೆಗೆ ಬೀಳಗಿ ತಲುಪಿದೆವು. ಬೀಳಗಿಯಲ್ಲಿ ಮೆರವಣಿಗೆಯಾಯಿತು. ಬಜಾರ್ ಮಧ್ಯದಲ್ಲಿ ಧ್ವಜಾರೋಹಣ ಮಾಡಿ ಭಾಷಣವಾಯಿತು. ನೇಟಿವ್ಹ್ ಜನರಲ್ ಲೈಬ್ರರಿಯಲ್ಲಿ ರಾತ್ರಿ ಇಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದರು. ೮ನೆ ತಾರೀಖು ಮುಂಜಾನೆ ಸೊನ್ನಕ್ಕೆ ಹೋಗಿ ಸಂಜೆ ಬಾಡಿಗೆಗೆ ಬಂದೆವು. ೫ನೇ ತಾರೀಖಿನ ದಿನ ಬಾಗಲಕೋಟದಿಂದ ಬಿಸನಾಳಕ್ಕೆ ಉಪ್ಪಿನ ಕಾಯ್ದೆ ಭಂಗಮಾಡಲು ಹೊರಟ ಲಾಲಾಜಿ ಪಥಕದ ವೀರರು ಅಲ್ಲಲ್ಲಿಗೆ ಹಾದಿ ಹಾದಿಗಳಲ್ಲಿ ಜನರಿಂದ ಸನ್ಮಾನ ಸತ್ಕಾರಗಳನ್ನು ಸ್ವೀಕರಿಸಿ ಬಿಸನಾಳಕ್ಕೆ ತಲುಪಿದರು.

ಬಿಸನಾಳದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಓರ್ವ ಪ್ರತ್ಯಕ್ಷದರ್ಶಿಯು ಕಾಯ್ದೆ ಭಂಗದ ಬಗ್ಗೆ ಅಂದಿನ ಘಟನೆ ಕುರಿತು ಕನ್ನಡಿಗ ಪತ್ರಿಕೆಯಲ್ಲಿ ವರದಿ ಮಾಡಿದ್ದಾನೆ. ೧೦ನೇ ತಾರೀಖು ಮಧ್ಯಾಹ್ನ ೨ ಗಂಟೆಗೆ ಸ್ವಯಂ ಸೇವಕರು ಅಖಿಲ ವಾದ್ಯ ವೈಭವದೊಡನೆ ಬಿಸನಾಳಿಗೆ ಬಂದರು



ಸಾವಿರಾರು ಜನರು ಅವರನ್ನು ಹಿಂಬಾಲಿಸಿದರು. ಈ ಮೊದಲೆ ಬಿಸನಾಳಿಗೆ ಬಾಗಲಕೋಟದ ಪೋಲೀಸ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಮತ್ತು ೪-೬ ಸಿಪಾಯಿಯವರು ಬಂದಿದ್ದರು. ಬಿಸನಾಳದ ಜನರು ಸತ್ಯಾಗ್ರಹದ ಯಶಸ್ವಿಗಾಗಿ ನಾಲ್ಕಾರು ದಿವಸಗಳ ಮುಂಚಿತವಾಗಿ ಪೂರ್ವ ಸಿದ್ಧತೆಯನ್ನು ಮಾಡಿದ್ದರು. ಅಲ್ಲದೆ ಪಕ್ಕದ ಊರು ಗಲಗಲಿಯ ಅಬಾಲ ವೃದ್ಧರಾದಿಯಾಗಿ ಸ್ತ್ರೀಯರು ಸಹಿತ ಪಾಲ್ಗೊಂಡಿದ್ದರು. ಸ್ವಯಂ ಸೇವಕರು ಗಲಗಲಿಯಿಂದ ರಣಕ್ಷೇತ್ರಕ್ಕೆ ಹೊರಡುವ ಕಾಲಕ್ಕೆ ರಸ್ತೆಗಳು ತಳಿರು ತೋರಣಗಳಿಂದ ಶೋಭಿಸಿದವು ಓಣಿಗಳಲ್ಲಿ ಹಾಯ್ದು ಹೋಗುವ ಸತ್ಯಾಗ್ರಹಿಗಳಿಗೆ ಅಲ್ಲಿಯ ವೀರ ಪತ್ನಿಯರು ವೀರ ವನಿತೆಯರು, ವೀರಭಗಿನೀಯರು, ವೀರ ಮಾತೆಯವರು ಆರತಿ ಮಾಡಿದರು. ಅಲ್ಲಿಯ ಹಿರಿಯರು ಯಶ ದೊರೆಯಲ್ಲೆಂದು ಅನುಗ್ರಹಿಸಿದರು. ಗಲಗಲಿಯ ಸತ್ಯಾಗ್ರಹಿಗಳು ೩ಗಂಟೆಗೆ ಬಿಸನಾಳಿಗೆ ಬಂದಾಗ ಅಲ್ಲಿ ನೆರದಿದ್ದ ಮೂರು ಸಾವಿರ ಜನರು ಕೂಡಿ ಅವರನ್ನು ಸ್ವಾಗತಿಸಿದರು. ಬಿಸನಾಳದಲ್ಲಿಯು ಓಣಿಗಳು ತಳಿರು, ತೋರಣಗಳಿಂದ ಶೋಭಿಸುತ್ತಿದ್ದವು. ಸ್ವಯಂ ಸೇವಕರ ಮೆರವಣಿಗೆಯು ಊರೊಳಗೆ ಹಾಯ್ದು ಆರತಿ ಮುಗಿದ ಬಳಿಕ ಒಂದು ಮೈಲು ದೂರ ಇರುವ ರಣಕ್ಷೇತ್ರಕ್ಕೆ ಹೊರಟರು. ಕಲ್ಲು ಮುಳ್ಳಿನ ಹಾದಿಯಲ್ಲಿ ಮೂರು ಸಾವಿರ ಜನರು ಕಾಯ್ದೆ ಭಂಗಕ್ಕೆ ಸಾಗಿದರು. ರಣಕ್ಷೇತ್ರದಲ್ಲಿ ಮೊದಲು ರಾಷ್ಟ್ರಧ್ವಜ ಹಾರಿಸಿ ರಾಷ್ಟ್ರಗೀತೆಗಳನ್ನು ಹಾಡಿದರು. ಮೊದಲು ಐದು ಸ್ವಯಂ ಸೇವಕರು ಉಪ್ಪಿನ ಮಣ್ಣನ್ನು ಹಳ್ಳದೊಳಗಿಂದ ಕೆದರಿ ಗಡಿಗೆಗಳಲ್ಲಿ ತುಂಬಿಟ್ಟರು. ನಂತರ ನೆರೆದ ಜನರೆಲ್ಲರು ಉಪ್ಪಿನ ಮಣ್ಣನ್ನು ಟೊಪ್ಪಿಗೆಗಳಲ್ಲಿ, ಕಂಬಳಿಯಲ್ಲಿ, ಮುಷ್ಟಿಯಲ್ಲಿ, ಬೊಗಸೆಯಲ್ಲಿ ಮನಸ್ಸು ತಣಿವುವಂತೆ ತುಂಬಿಕೊಂಡರು. ನಂತರ ಪುನಃ ಬಿಸನಾಳಕ್ಕೆ ಬಂದು ಅಗಸಿಯ ಮುಂದೆ ಒಲೆಗಳನ್ನು ಹೂಡಿ ತಾವು ತಂದ ಮಣ್ಣಿನಿಂದ ಶುದ್ಧವಾದ ಉಪ್ಪನ್ನು ಸಿದ್ಧಪಡಿಸಿ ಹಂಚಿದರು. ನಂತರ ಧ್ವಜಾರೋಹಣ ಭಾಷಣಗಳಾದವು ರಾಷ್ಟ್ರಗೀತೆಯಾದ ಬಳಿಕ ಸಭೆ ವಿಸರ್ಜನೆಗೊಂಡಿತು. ಪವಿತ್ರವಾದ ಮಾತೃಭೂಮಿಯ ಪ್ರಸಾದವೆಂದು ಜನರು ಉಪ್ಪಿನ ರುಚಿ ನೋಡಿದರು. ಕೆಲವರು ಉಪ್ಪನ್ನು ವಿಜಯದ ಚಿನ್ಹೆ ಎಂದು ಭಾವಿಸಿ ಕಿಸೆಯಲ್ಲಿ ತುಂಬಿಕೊಂಡರು. ಜಯ ಜಯಕಾರ ಪ್ರಚಂಡವಾಗಿ ಕೇಳಿ ಬರುತಿತ್ತು. ಶಾಂತತೆಗೆ ಎಲ್ಲಿಯು ದಕ್ಕೆ ಬರಲಿಲ್ಲ. ೧೧ ಜನ ಸ್ವಯಂ ಸೇವಕರ

ಗುಂಪು ಬಿಸನಾಳದಲ್ಲಿಯೇ ಬಿಡು ಬಿಟ್ಟಿತ್ತು. ಇದರಲ್ಲಿ ಯಾರಾದರೂ ಬಂಧನಕ್ಕೆ ಒಳಗಾದರೆ ಅವರ ಸ್ಥಾನದಲ್ಲಿ ಹೊಸ ಸ್ವಯಂ ಸೇವಕರನ್ನು ಕಳಿಸುವ ವ್ಯವಸ್ಥೆ ಮಾಡಲಾಗಿದೆ.

ಸತ್ಯಾಗ್ರಹದ ಶಿಬಿರಾರ್ಥಿಗಳಾದ ಸಾ. ಗೋವರ್ಧನದಾಸರು ಬಿಸನಾಳದ ಉಪ್ಪಿನ ಸತ್ಯಾಗ್ರಹದ ಬಗ್ಗೆ ಕನ್ನಡಿಗದಲ್ಲಿ ದಿನಾಂಕ ೨೫–೦೫–೧೯೩೦ರಂದು ಉಲ್ಲೇಖಿಸುತ್ತಾ ಬಿಸನಾಳದ ಹವೆಯು ಆರ್ದ್ರವಾಗಿರುವುದರಿಂದ ಮಣ್ಣಿನಲ್ಲಿರುವ ಉಪ್ಪು ಕರಗಿ ಕಪ್ಪು ಬಣ್ಣದಲ್ಲಿ ಬರುತ್ತಿದೆ. ಸಂಜೆ ಹೊತ್ತು ಸಿಂದಗಿಯವರು ಕೀರ್ತನೆ ಮಾಡಿ ಬಿಸನಾಳದ ಜನರು ಚಳವಳಿಯಲ್ಲಿ ಭಾಗವಹಿಸುವಂತೆ ಮಾಡಿದರು. ಊರಿನ ಅಸ್ಪೃಶ್ಯ ಭಗಿನಿಯರು ಸಿಂಧೂರ ಲಕ್ಷ್ಮಣ ಮತ್ತು ಕಟ್ಟೆಯ ಚನ್ನಪ್ಪ ಇವರ ಜೀವಮಾನದೊಳಗಿನ ಹಲವು ಸಂಗತಿಗಳ ಕುರಿತು ಲಾವಣಿಯನ್ನು ಹಾಡಿ ಮತ್ತಷ್ಟು ಜನರು ಕಾಯ್ದೆ ಭಂಗದಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಬಿಸನಾಳದಿಂದ ೨ ಮೈಲಿ ಅಂತರದಲ್ಲಿದ್ದ ಬೂದಿಹಾಳ ಗ್ರಾಮದಲ್ಲಿ ೧೩ನೇ ತಾರೀಖದಂದು ಜಾತ್ರೆ ಇದ್ದು ಲಾಲಾಜಿ ಪಥಕದ ಸ್ವಯಂ ಸೇವಕರು ಅಂದು ಉಪ್ಪಿನ ನೀರನ್ನು ಹಾಗೂ ಉಪ್ಪಿನ ಮಣ್ಣನ್ನು ತೆಗೆದುಕೊಂಡು ಹೋಗಿ ಸ್ವದೇಶಿ ಉಪ್ಪಿನ ಪ್ರಚಾರ ಮಾಡಿದರು. ನೆರೆದಿದ್ದ ಒಂದು ಸಾವಿರ ಜನರಿಗೆ ಉಪ್ಪನ್ನು ತಯಾರಿಸುವ ವಿಧಾನವನ್ನು ಕಲಿಸಿದರು. ಸಂಜೆ ವೇಳೆಯಲ್ಲಿ ಮಹಾತ್ಮರ ಬಂಧನ ಹಾಗೂ ಉಪ್ಪಿನ ಕಾಯ್ದೆ ಭಂಗದ ವಿಷಯವಾಗಿ ಸ್ವಯಂ ಸೇವಕರು ಭಾಷಣ ಮಾಡಿದರು.

೧೮ನೇ ತಾರೀಖು ಬೀಳಗಿಯ ಪೌಜದಾರ ಜಮಾದಾರ ಹಾಗೂ ಇಬ್ಬರು ಸಿಪಾಯಿಗಳು ಬಿಸನಾಳಕ್ಕೆ ಹೋಗಿ ಸತ್ಯಾಗ್ರಹಿ ಶಿಬಿರದ ಹತ್ತಿರದಲ್ಲಿಯೇ ಇಳಿದುಕೊಂಡಿದ್ದರು ಸಹಿತ ಲಾಲಾಜಿ ಪಥಕದವರು ಪ್ರತಿ ದಿವಸದಂತೆ ಆ ದಿನವು ಉಪ್ಪನ್ನು ಸಿದ್ಧಪಡಿಸಿದರು. ಫೌಜದಾರ ಯಾರನ್ನು ಬಂಧಿಸಲಿಲ್ಲ ಆದರೆ ಚಳವಳಿ ತೀವ್ರಗೊಂಡಾಗ ಪೊಲೀಸರು ಸತ್ಯಾಗ್ರಹಿಗಳನ್ನು ಬಂಧಿಸತೊಡಗಿದರು. ಇದರಿಂದ ಸ್ಫೂರ್ತಿ ಪಡೆದ ಗಲಗಲಿಯ ಜನರು ಸತ್ಯಾಗ್ರಹವನ್ನು ತೀವ್ರಗೊಳಿಸಲು ನಿರ್ಣಯಿಸಿದರು. ಯಾವ ಸ್ಥಳದಲ್ಲಿ ಯಾವ ಮಣ್ಣಿನ ಸಲುವಾಗಿ ಅವರು ಸೆರೆ ಹಿಡಿಯಲ್ಪಟ್ಟಿದ್ದರೂ ಅಲ್ಲಿಗೆ ಹೋಗಿ ಪುನಃ ಸತ್ಯಾಗ್ರಹ ಮಾಡಬೇಕು ಸತ್ಯಾಗ್ರಹಿಗಳನ್ನು ಹಿಡಿದರೆ ಪುನಃ ಮರುದಿವಸ ಕೆಲವು ಜನರು ಹೋಗಿ ಅದೇ ಕೃತಿಯನ್ನು ಮಾಡಬೇಕು ಎಂದು ನಿರ್ಧರಿಸಿದರು. ೨೦ನೆ ತಾರೀಖಿನಂದು ಐದು ಮಂದಿ ಒಂದೊಂದು ಚೀಲವನ್ನು ತಕ್ಕೊಂಡು ಬಿಸನಾಳಕ್ಕೆ ಹೋಗಿ ಅದೇ ಸ್ಥಳದಲ್ಲಿ ಮಣ್ಣನ್ನು ತುಂಬಿಕೊಂಡು ಬಂದರು. ಪೌಜಧಾರ ಮತ್ತು ಹವಾಲ್ದಾರರು ಸತ್ಯಾಗ್ರಹಿಗಳನ್ನು ತಡೆದು ಮಣ್ಣಿನ ಹರಕತ್ತು ಇದೆ, ಒಯ್ಯಬೇಡಿರಿ ಎಂದು ಹೇಳಿದಾಗ ಸತ್ಯಾಗ್ರಹಿಗಳು ನಾವು ಒಯ್ಯುವವರು ನೀನು ಮಾಡತಕ್ಕದ್ದು ಮಾಡು ಎಂದು ಹೇಳುತ್ತಾ ಶಾಂತರೀತಿಯಿಂದ ಚೀಲವನ್ನು ತೆಗೆದುಕೊಂಡು ಗಲಗಲಿಗೆ ಹೋದಾಗ ಈ ಐದು ಜನರನ್ನು ಗಲಗಲಿಯ ಜನರು ಭಜಂತ್ರಿಯೊಂದಿಗೆ ರಾತ್ರಿ ಗ್ಯಾಸಿನ ಬೆಳಕಿನಲ್ಲಿ ಭವ್ಯವಾಗಿ ಸ್ವಾಗತಿಸಿದರು.

ಗಲಗಲಿಯ ಮಹಾದೇವಪ್ಪ ಕತ್ತಿಯವರು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಬಿಸನಾಳ ಗ್ರಾಮದ ಜನತೆಯ ಸಹಕಾರ ಕುರಿತು ಸತ್ಯಾಗ್ರಹಿಗಳಿಗೆ ಗ್ರಾಮದ ಜನರು ಊಟದ ವ್ಯವಸ್ಥೆ ಮಾಡಿದ್ದರು. ನಾಗರಿಕ ಕಾರ್ಯಕರ್ತರು ಅಡುಗೆಗಾಗಿ ಪ್ರತಿಮನೆಯಿಂದ ಇಂತಿಷ್ಟು ಅಕ್ಕಿ, ಜೋಳ, ಬೆಲ್ಲವನ್ನು ಸಂಗ್ರಹಿಸಿ ಕೊಡುತ್ತಿದ್ದರು. ಶಿವಬಸಪ್ಪ ಉಪ್ಪಿನ ಅವರ ಮನೆಯಲ್ಲಿ ಸತ್ಯಾಗ್ರಹಿಗಳಿಗೆ ಊಟದ ವ್ಯವಸ್ಥೆ ಇರುತ್ತಿತ್ತು ಹಾಗೂ ಪ್ರತಿದಿನ ಇವರ ಮನೆಯ ಮುಂದಿನ ಕಟ್ಟೆಯ ಮೇಲೆ ಸತ್ಯಾಗ್ರಹಿಗಳು ಸಭೆ ಸೇರುತ್ತಿದ್ದರು. ಬಿಸನಾಳದ ಭಾಷಾಸಾಬ್ ಅಲ್ಲಾಡಿ, ಹಣಮಂತ ಹಣಮಾರ, ಲಕ್ಷ್ಮಪ್ಪ ಕುಬಕಡ್ಡಿ, ಬಸಪ್ಪ ಕೊಪ್ಪದ, ಸಂಗಪ್ಪ ತುಪ್ಪದ ಗಂಗಯ್ಯ ಹಿರೇಮಠ ಮುಂತಾದವರು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಶಿವಬಸಪ್ಪನವರು ಉಪ್ಪಿನ ಸತ್ಯಾಗ್ರಹದಲ್ಲಿ ಮುಂದಾಳುಗಳಾಗಿರುವದರಿಂದ ಇವರ ಮನೆತನಕ್ಕೆ 'ಉಪ್ಪಿನ' ಎಂದು ಹೆಸರು ಬಂದಿತು. ಬಿಸನಾಳದಲ್ಲಿ ಉಪ್ಪಿನ ಸತ್ಯಾಗ್ರಹ ನಡೆದಿರುವದರಿಂದ ಈ ಊರಿಗೆ ಉಪ್ಪಿನ ಬಿಸನಾಳ ಎಂದು ಕರೆಯುತ್ತಿದ್ದರು.

೧೯–೦೬–೧೯೩೦ ರಂದು ಕೆರೂರದಲ್ಲಿ ಬೀಳಗಿ ಪಟ್ಟದ ದೇವರ ನೇತೃತ್ವದಲ್ಲಿ ಸಭೆ ಜರುಗಿತು. ಇಂಗಳಗಿ ಮಠದ ಮೃತ್ಯುಂಜಯ ಸ್ವಾಮಿಗಳು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯು ಮುಕ್ತಾಯಗೊಂಡ ನಂತರ

ಸಿಂದಗಿ ಎಂಬುವವರು ಬಿಸನಾಳದಲ್ಲಿ ತಾವೇ ಸ್ವತಃ ತಯಾರಿಸಿದ ಉಪ್ಪನ್ನು ಮಾರಿದರು.

ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಆಜ್ಞೆಯಂತೆ ಬಿಸನಾಳದಲ್ಲಿ ಸ್ವಯಂ ಸೇವಕರನ್ನು ಸರಕಾರ ಬಂಧಿಸಿದ ಸ್ವಯಂ ಸೇವಕರಿಗೆ ಅಭಿನಂದನೆ ಮಾಡಿತು. ಗಲಗಲಿಯ ಸ್ವಯಂ ಸೇವಕರಿಗೆ ಶಾಂತ ರೀತಿಯಿಂದಲೂ ಮತ್ತು ಸತ್ಯಾಗ್ರಹ ಮಂಡಲದವರು ಹಾಕಿಕೊಟ್ಟ ನಿಯಮಗಳಿಗೆ ಅನುಸರಿಸಿಯೂ ಉಪ್ಪು ತಯಾರಾಗಬಹುದಾದ ಎಲ್ಲ ಸ್ಥಳಗಳಲ್ಲಿ ಉಪ್ಪಿನ ಕಾಯ್ದೆ ಭಂಗ ಮಾಡಲು ಧಾರವಾಡದಿಂದ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಅಪ್ಪಣೆ ಕೊಟ್ಟರು. ಬಾಗಲಕೋಟದಲ್ಲಿ ಲಿಂಗಾಪೂರ ಎಂಬ ಸ್ವಯಂ ಸೇವಕನು ಬಿಸನಾಳ ಭೂಮಿಯಲ್ಲಿ ತಯಾರಿಸಿಕೊಂಡ ಉಪ್ಪು ಐದು ರೂಪಾಯಿಗೆ ಲೀಲಾವು ಮಾಡಿದರು. ಕೃಷ್ಣಾಜಿ ಗೋಪಾಲ ನಾಯಕ ಗಣಿ ಎಂಬುವರು ಅದನ್ನು ಖರೀದಿಸಿದರು. ಸಬ್ ಇನ್‌ಸ್ಪೆಕ್ಟರ್ ಇವರನ್ನು ಬಂಧಿಸಿದ ಶ್ರೀವಾಸರಾಯರು ನೂರು ಇನ್ನೂರು ಚೀಟಿಗಳನ್ನು ಸ್ವಯಂ ಸೇವಕರ ಸಹಾಯದಿಂದ ಸಭೆಯಲ್ಲಿ ಮಾರಿಸಿದರು.

ಹಣಮಂತ ಜೋಶಿಯವರು ತಮ್ಮ ಸ್ಮೃತಿಯಲ್ಲಿ ದಾಖಲಿಸಿದಂತೆ ದಿವಾಕರರ ನೇತೃತ್ವದಲ್ಲಿ ೨೫–೩೦ ಜನರು ಹೊನಗನಹಳ್ಳಿಯ ಹತ್ತಿರ ದೋಣಿ ನದಿಯಲ್ಲಿ ಉಪ್ಪು ತಯಾರಿಸಿದೆವು. ಸಂಜೆಯ ಸಭೆಯಲ್ಲಿ ಲೀಲಾವು ಮಾಡಲಾಗಿ ೩೫ ರೂಪಾಯಿ ಬಂದವು. ಇದೇ ಪ್ರಕಾರ ಪ್ರತಿ ದಿನ ಒಬ್ಬೊಬ್ಬರ ಡಿಕ್ಟೇಕಟರ್‌ಶಿಪ್ಪಿನಲ್ಲಿ ಉಪ್ಪು ತಯಾರಿಸಲಾಯಿತು. ಹಣಮಂತರಾವ ಮೊಹರೆ, ಶ್ರೀನಿವಾಸರಾವ ಕೌಜಲಗಿ, ಕಾಕಾ ಕಾರಖಾನೀಸ ಮೊದಲಾದವರ ನೇತೃತ್ವದಲ್ಲಿ ಸತ್ಯಾಗ್ರಹ ನಡೆಯಿತು.

ಬದಾಮಿ ಮತ್ತು ಗುಳೇದಗುಡ್ಡಗಳಲ್ಲಿನ ಸ್ಥಳೀಯರು ಗೋವಾದಿಂದ ಉಪ್ಪನ್ನು ತರಿಸಿ ಕಾನೂನು ಭಂಗ ಮಾಡಿದರು. ಸಿಂದಗಿಯಲ್ಲಿ ಎಸ್.ವೈ.ಪಾಟೀಲ, ವೆಂಕೂಬಾಯಿ ಕೆರೂರು, ತುಳಸಿಬಾಯಿ ಬುರ್ಲಿ ಮತ್ತು ಗಂಗವ್ವ ಅಂಬಲಿ ಇನ್ನು ಕೆಲವು ಮಹಿಳೆಯರು ಸೇರಿದಂತೆ ಉಪ್ಪಿನ ಸತ್ಯಾಗ್ರಹ ನೆರವೇರಿಸಿದ್ದಕ್ಕಾಗಿ ಬಂಧನಕ್ಕೆ ಒಳಗದರು.



ಉಪ್ಪಿನ ಸತ್ಯಾಗ್ರಹ ಬಾಗಲಕೋಟ, ವಿಜಾಪುರ ಜಿಲ್ಲೆಗಳಲ್ಲಿ ಮಹತ್ವ ಪಡೆಯಿತು ಉಪ್ಪಿನ ಸತ್ಯಾಗ್ರಹದಿಂದ ಮನೆಮನೆಗಳಲ್ಲಿ ಉಪ್ಪು ನೀರಿನ ಬಾವಿಗಳಿಗೆ ಬೆಲೆ ಬಂತು. ಅದರಲ್ಲಿನ ನೀರನ್ನೆ ಕುದಿಸಿ ತಯಾರಿಸಿದ ಚಿಟಿಗಿ ಉಪ್ಪಿಗೆ ದೇವರ ಪ್ರಸಾದದಷ್ಟು ಮಹತ್ವ. ಕಡಲ ತೀರದಿಂದ ತಂದ ಉಪ್ಪಿನ ಚೀಟಿಗಳು ನೂರಾರು ರೂಪಾಯಿಗಳಿಗೆ ಹರಾಜಾದವು. ಸತ್ಯಾಗ್ರಹಿಗೆ ಹಾಕಿದ ಹಾರಕ್ಕೆ ಅತಿ ಹೆಚ್ಚಿನ ಬೆಲೆ ರಾಷ್ಟ್ರೀಯ ಚಳವಳಿಯ ನಿಧಿ ಹೀಗೆ ವೃದ್ಧಿಯಾಯಿತು. ಬಯಲು ಪ್ರದೇಶವಾದ ಬಾಗಲಕೋಟ ಜಿಲ್ಲೆಯಲ್ಲಿ ಉಪ್ಪಿನ ಸತ್ಯಾಗ್ರಹವು ಅತ್ಯಂತ ಯಶಸ್ವಿಯಾಗಿ ನಡೆಯಿತು.

●

# ಕಾವ್ಯಗಳಲ್ಲಿ ಸ್ವಾತಂತ್ರ್ಯ ಚಳವಳಿ

## ೧. ಹುಟ್ಟುವಳಿಯ ಮೇಲೆ ತೆರಿಗೆ ಹಾಕಿದಾಗ ಹೊರಹೊಮ್ಮಿದ ಲಾವಣಿ

ಏನು ಹೇಳಲಿ ಜನ್ಮದ ಗೋಳಾ
ಇಂಗರಜಿ ಉಪದರ ಆದೀತು ಬಹಳಾ
ಬಡವರು ಅಳತಾರೊ ಗಳಾಗಳಾ
ಮಾಡತಾರೊ ಚಿಂತಿ ॥

ಕಠಿಣ ಬಡವರದ ತುಂಬೋದು ಹೊಟ್ಟಿ
ಮಾರಿ ಕೊಟ್ಟಾರೊ ನೂಲುವ ರಾಟಿ
ದುಡ್ಡಿನ ಆಶೆ ಹತ್ತಿತ ಸರಕಾರಕ
ಹಲಗೀ ಕುಂಟೆ ರೇಸಮಿ ಪಟ್ಟಿ
ಭಾಂಡೇ ಸಾಮಾನಾ ಜಮಾನು ಪಾಟಿ
ಲೀಲಾವ ಮಾಡಸ್ಯಾರು ಕಿಮ್ಮತ ಕಟ್ಟಿ
ಭಾಳ ಕಟ್ಟಾರಂಣಾ ಸರಕಾರಾ
ಬಡವರು ತಂದಾರ ಕಣ್ಣೀರಾ
ಹೆಂತಾ ವ್ಯಾಳೆ ತಂದಿ ಈಶ್ವರಾ
ನಮಗ ಯಾರದು ಇಲ್ಲಾ ಅದರ್‍ಯಾ

* ಹೊಸಗನ್ನಡದ ಅರುಣೋದಯ 'ಶ್ರೀನಿವಾಸ ಹಾವನೂರ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦.

## ೨. ಎದ್ದೇಳಿ ಕನ್ನಡಿಗರೇ

ಬನ್ನಿರಿ ಬನ್ನಿರಿ ಕನ್ನಡ ಚಿಣ್ಣರೆ
ಸತ್ಯಾಗ್ರಹಕ್ಕೆ ತೆರಳೋಣ
ಕನ್ನಡ ನಾಡಿನ ಬನ್ನವ ಬಿಂಬಿಸುವ
ಮೊದಲನೆ ಮೆಟ್ಟಿಲು ಏರೋಣ
ನಮ್ಮಯ ನಾಡಿನ ಉಪ್ಪನೆಲ್ಲಾ ತಮದಾಗಿ ಮಾಡಿರುವ
ಆಳರ ಕೈಯ್ಯಿಂ ।
ತಾಳ್ಮೆಯಿಂದಲಿ ।
ಉಪ್ಪನ್ನು ಕಸಿಯಲು ನಾಡಿನ ಯುವಕರು
ದೈರ್ಯದಿಂದ ಸಾಗೋಣ ॥೧॥

ಭಾರತ ಭೂಮಿಯ ಒಡಲೊಳಗಿರುತಿಹ
ಉಪ್ಪಿನ ಒಡೆಯರು ನಾವೆಲ್ಲ
ನಮ್ಮಯ ಉಪ್ಪನು ನಾವೆ ತಿನ್ನಲು
ಕಪ್ಪನು ನಾಡಿಗನಿಡಬೇಕೆ ?
ಕಾರಣವಿಲ್ಲದೆ ಕರಗಳ ಹೇರಿದ
ಸಪ್ಪಗೆ ಕೂಡ್ರುವದೇತಕ್ಕೆ ?
ಹಿರಿಯರು ಕಿರಿಯರು
ದುರ್ಬಲರೆನ್ನದೆ
ಸರುವರೊಂದಿಗೆ ಭಾರತ ಯಜ್ಞಕೆ
ಆತ್ಮಾತಿಯನ್ನಿಯೋಣ ॥೨॥

ಯುದ್ಧದ ಭೇರಿಯ ಗರ್ಜನೆ ಕೇಳದೆ
ಕಿವುಡರಾದಿರಾ ನಾಡಿಗರೇ
ಯುದ್ಧದ ತಂಡಕೆ ತಂಡವೆ ಸಾಗಿರೆ
ಷಡು ತರದಿಂ ಕೂಡ್ರುವವರೆ
ಹಿಂದಣ ಹಿರಿಯರು ನಮ್ಮ ನಡತೆಗೆ
ಕುದಿಯಲಾರರೇ ಬಂಧುಗಳೇ
ಹಿಂದಣ ಹಿರಿಯರ
ಸಂತಸ ಗೊಳಿಸಲು
ನಿಮ್ಮಯ ಶಕ್ತಿಯ ತಿಲಕರ್ಪಣವನು
ನೀಡುತ ನಡೆಯಿರಿ ಕಾಳಗಕೆ ॥೩ ॥

ಕತ್ತೆಯ ತರದಿಂ ತಿಂದು ಸತ್ತರೆ
ಮಾನವ ಜನ್ಮದ ಸಾರ್ಥಕವೆ
ಮಾತೆಯ ಪಾಕವ ಹರಿದೊಗೆಯಲೆ
ಹೇಡಿಗಳಂತೆ ಕೂಡ್ರುವದೆ
ಕೈದುಗಳಿಲ್ಲದ ಕಾಳಗವಾಡುವ
ಸೊಬಗನು ಕಾಣ್ದವ ಮಾನವನೆ
ಎಲ್ಲಿ ನಿನ್ನಬಾಳು
ಎಲ್ಲಿ, ಎಲ್ಲಾ ಹಾಳು
ಸ್ವಾತಂತ್ರ್ಯವಿಲ್ಲದೆ ಬಾಳೊಂದು ಬಾಳೆ
ಎದ್ದೇಳಿ ಕನ್ನಡಿಗರೇ ॥ ೪ ॥

## ೩. ಗಂಗಾಧರರಾಯರು ಕಾರಾಗೃಹಕ್ಕೆ ನಡೆದರು ತರುಣರು ಮಾಡುವದೇನು?

ಭಾರತೀಯ ನಿಟ್ಟದಿಟ್ಟಿಯಲಿ
ನಾಡಿನ ಹಿರಿಯರ ನೋಡುತಿರೆ
ಹಿರಿಯರಿಗೆ ಮನ್ನಣೆ ಪಿರಿದಾಗಿ
ಅರಸನ ಅತಿಥಿಗಳಾಗಿಹರು
ಕರಿನಾಡದಂಡನಾಯಕನೂ
ಕಾರಾಗೃಹವನ್ನೆರಿದನು
ಹಿರಿಯನ ಬಾದನ್ನಡೆಕೊಟ್ಟು
ಹರೆಯ ಹುಡುಗರು ಎದೆಗಟ್ಟು
ಕರಿನಾಡ ಕೀರ್ತಿಯನ್ನುಳಿಸುವಿರೋ ?
ಭಾರತೀಯ ಗುಡಿಯನುಳಿಸುವಿರೋ ॥ ೧ ॥

ಮಾಗಿಯ ಹೊತ್ತದು ಹರತನವು
ಹಾರುತ್ತ ಮುಂದೆನಾಗುವದು
ಸಾಗಿರಿಸತ್ಯದ ಕಾಳಗಕೆ
ಸಾರ್ಥಕವು ನಮ್ಮ ಹರೆತನವು
ರಣದಲ್ಲಿ ಮಡಿಯೆ ಕೇಡೆನು
ಹೆಣವಾಗಿ ಜಗತಿಗೆ ಬಾಳುವರೆ
ಮುಂದಾಳು ಜಾರಿ ಹೋಗಿಹನೆಂದು
ಮುಂದಿಟ್ಟುಡಿಯನುಪಿಂತಗೆದು
ರಣಹೇಡಿಗಳೀನಾಡವರು
ಎಂದೆಂಬ ಬಿರುದುಗಳಿಸುವಿರಾ ॥ ೨ ॥

ಕೆಚ್ಚೆದೆಯ ಗಂಡುತನವನ್ನು
ನಿಜ ಸಮರದಲ್ಲಿ ತೋರಿಸಿ
ರೊಚ್ಚಿನ ಕಿಚ್ಚಿದು ಹೊರಗೆದ್ದು
ಹೆಚ್ಚಾಗಿ ನರಗಳಲ್ಲಿ ಹರಿದಾಡಿ
ಸ್ವಾತಂತ್ರ್ಯಮೂರ್ತಿ ಮೋಹನನ
ಪರತತ್ವದಲ್ಲಿ ಸೂಸಾಡಿ
ಭಾರತಿಯ ಬಾವುಟಡಿ ಒಡಮೂಡಿ
ಆಳಸರಸರಲ್ಲಿ ಭಯ ಮೂಡಿ
ಸ್ವಾತಂತ್ರ್ಯ ದೇವಿಗೆ ಕರೆಯಾಗೆ
ಸಾರ್ಥಕವು ನಮ್ಮ ಹರೆತನವು ॥ ೩ ॥

•

## ೪. ಮಂಗಲ ನಿಮಗಾಗಲಿ ನಿಮ್ಮಿಂದ ಹಿಂದ ಮಾತೆಗೆ

ಮಂಗಲ ನಿಮಗಾಗಲಿ ನಿಮ್ಮಿಂದ ಹಿಂದ ಮಾತೆಗೆ
ಹಿಂಗಲಿ ಪರತಂತ್ರತೆಯು ರಥಾಂಗಧರನ ಕಬಣದಿ ॥ ಪ ॥
ಸಮರ ಭೂಮಿಗೈದಲಿರುವ ಧೀರ ಕನ್ನಡಿಗರಿಗೆ
ಅಮಿತ ಹರುಷದಿಂದ ರಣಾಂಗಣಕೆ ಧುಮುಕಲಿಹರಿಗೆ ॥ ೧ ॥

ಅಂಕೋಲೆಗೆ ಪಯಣ ಬೆಳಸಿ ಆಂಗ್ಲರೀ ಪ್ರಭುತ್ವದ
ಸಂಕೋಲೆಗಳ ಕಡಿಮೆ ಸುಖವತರುವ ಸಾಹಸಿಗರಿಗೆ॥ ೨ ॥
ಬಿದ್ದನಾಡಿನುದ್ಧರಿಸಲು ಬದ್ಧ ದೀಕ್ಷರಾದವರಿಗೆ

ಮುದ್ದು ಮೋಹನನ ವಿಶುದ್ಧ ಪದ್ಧತಿಯನು ಬಿಡದವರಿಗೆ ॥ ೩ ॥

•

## ೫. ಗೆಲವು ಕಟ್ಟಿಟ್ಟದ್ದು

ಭಾರತೀಯ ಬಂಧನವ ಹರಿಯಲಿಕ್ಕೆ
ನಾಡಿನಯುವಕರು ತ್ವೇಷದಲಿ
ಕಾರಾಗೃಹವನ್ನು ಮಿಗೆಲೆಕ್ಕಿಸದೆ
ಉಪ್ಪಿನ ಕಟ್ಟಳೆ ಮುರಿಯಲಿಕ್ಕೆ
ವರ ಶೂರರಂತೆ ನಿಜ ಪ್ರಾಣವನು
ಕೈಯಲ್ಲಿ ಹಿಡಿದು ಸಾಗಿಹರು
ಜೀವಭವ ಹಂಗವನು ಹರಿದರು
ಪ್ರಾಣದ ಭೀತಿಯ ತೊರೆದವರು
ರಣದಲ್ಲಿ ಮಡಿಯೆ ಹೆದರುವವರೆ
ಆಳಾತ್ಮರ ಭೀತಿಗೆ ಬೆಚ್ಚುವರೆ ॥ ೧ ॥

ಶತಕೋಟಿ ಪ್ರಾಣಗಳು ಮರುಮರಗಿ
ಕುಳಿತಲ್ಲಿ ಕುಳಿತು ಬೇಸತ್ತು
ಮತ ಭಾವನೆಗಳೆಲ್ಲ ಕಿತ್ತೊಗೆದು
ರಣರಂಗದಲ್ಲಿ ತೆರಳುತಲಿ
ಪ್ರಾಣ ಪರಿವೆಯ ಹರಿದೊಗೆದು
ಗಾಂಧಿಯ ಸೇವಕರಾಗಿರುವರು
ಗಾಂಧಿಯೆ ಪರದೈವತನೆಂದು
ಬಂಧನ ತೋರಿವ ಹರಿಯೆಂದು
ಮೋಹನನ ಪದ ತಳದಿಹೊರಳಾಗಿ
ಧನ್ಯತೆಯ ವ್ಯಕ್ತಪಡಿಸಿಹರು ॥ ೨ ॥

ದ್ವಾಪರದ ಕೃಷ್ಣ ಪರಮಾತ್ಮ
ತ್ರೇತಾಯುಗದ ಸತ್ಯಶ್ರೀರಾಮ
ಕಲಿಯುಗದಿ ಭಾರತದ ಪರಮಾತ್ಮ
ನಾಗಿಹನು ಧನ್ಯ ಮಹಾತ್ಮ
ದೇವರ ದೇವನು ಮೋಹನನು
ಪೂರ್ತಿಯಗೊಳಿಸುವನು ಕಾರ್ಯವನು
ಹೀಗೆಂದು ಜನರು ಮುಂಬಂದು
ಸಾಕ್ದೆದು ಮನೆಯ ಹಿಂಬಂದು
ಭಾರತೀಯ ಸ್ವಾತಂತ್ರ್ಯಯಾಗಕ್ಕೆ
ಅಹುತಿಗಳಾಗಿ ನಡೆದಿಹರು ॥ ೩ ॥

ಒಟ್ಟೊಂದು ಕಟ್ಟಿನಲಿ ಜಗವೆಲ್ಲ
ಕಟ್ಟಿಟ್ಟು ತಮ್ಮ ಸ್ವಾರ್ಥವನು
ಹಿಟ್ಟಿನ ರೊಟ್ಟಿಯ ಕಾಯುವದಕ್ಕೆ
ಓಟ್ಟಾಗಿ ದಿಟ್ಟತನದಲ್ಲಿ
ಕಟ್ಟನು ಮೆಟ್ಟಲು ಭಾರತೀಯ
ಒಕಟ್ಟೆ ನಮ್ಮ ದೊರೆತನವು
ಕಲ್ಲಾದಮ್ಮಯ ಹೃದಯವನು
ಬೀರುತ ತಾಯಿಯ ಬ್ಯಾಯತಿನು
ಭೀಕರ ಗರ್ಜನೆ ಭೋರ್ಗರೆಯೆ
ಚೂರಾಗಿ ಹರಿಯುವದು ಕಟ್ಟಳೆಯು ॥ ೪ ॥

•

## ೬. ನಮ್ಮ ಕೊಳಗುಳ

ಖಡ್ಗಗಳ ಹೊಳಪಿಲ್ಲ ಕೂರಸಿಯ ಹೊಯ್ಲಿಲ್ಲ
ಗುಂಡುಮದ್ದುಗಳಲ್ಲಿ ನಮ್ಮ ಕೊಳಗಳು
ಮುಂಡೆದಿರುಗಿದ, ತೋಳಬಲುವೆಮಗೆ ಬೇಕಿಲ್ಲ
ರುಂಡಗಳ ಮುಂಡಗಳ ನೆತ್ತರಿನ ಹೊಂಡದಲಿ
ಕತ್ತರಿಸಿ ಕೆಡಹುವರಿಲ್ಲ
ಭಲೆಗಳ ಈಟಿಗಳ
ಕೂರಿತದ ಹೊಳಪಿಲ್ಲ ನಮ್ಮ ಕೊಳಗುಳದಿ ॥ ೧ ॥

ಹುಂಬಶಕ್ತಿಯಬೇಡ, ಒಂಟಿತನ ಬೇಕಮಗೆ
ಕೈದುಗಕಬ್ಬರಬೇಡ, ಮೊಂಡಾಟ ತನವಿರಲಿ
ಚಿತ್ರಹಿಂಸೆಯು ಬೇಡ, ನಾವಹಿಂಸಿಗರಿಹೆವು
ದಿಟ್ಟ ಎದೆ ನಮಗಿರಲಿ, ಸುಟ್ಟು ಹೋಗಲಿಶಕ್ತಿ
ಮಾನಸಿಕ ಬಲವಿರಲಿ, ಸ್ವಾತಂತ್ರ್ಯ ಧ್ಯೇಯವಿರಲಿ
ಕ್ಷಾತ್ರಿ ವೃತ್ತಿಯಬೇಕೆ ? ಕೊಳಗುಳದಿ ॥ ೨ ॥

ಬಹ್ಮತೇಜ ಮುಂದೆ, ಕ್ಷತ್ರಿಯರಬಲ ಜೊಳ್ಳು
ಭಾಗುವವು ಕೀರಿಟಗಳು, ನಮ್ಮೋಜೆಯೆದುರಿನಲಿ
ಭಾರತೀಗೆ ಬೇಕಿಂದು ಇಂಥ ಸಾಹಸದುರಿಗೆ
ಹುರುಪಳಿಸಿ ಹರಿಗೊಂಡು ಸಾಯಲಿಹ ಬಂಟಣತಿಗರು
ಸ್ವಾರ್ಥ ವೃತ್ತಿಯ ಹರಿದು
ನಿಶ್ಯಸ್ತ್ರದಿಂತರಿದು
ಮಡಿಯಲಿಹ ಬಂಟರ್ರೈ ನಮ್ಮ ಕೊಳಗುಳದಿ ॥ ೪ ॥



ಹಳ್ಳಿಗಳ ಊರುಗಳ ಗಡಿದಾಟಿ ಬನ್ನಿರ್ರೈ
ಸಂಸಾರ ಸಾಗರದ ನಾವೇಯನು ಬದಿಗೊತ್ತಿ
ಹೆಂಡಿರನು ಮತ್ತು ಮಕ್ಕಳನು ನೆರೆ ಮರೆತು ಸಾಗಿರ್ರೈ
ಭಾರತೀಯ ಶೆರೆಯನ್ನು ಹಂದೊಗೆವಪಣ ಹೂಡಿ
ಹೊಲಗಳನ್ನು ಮನೆಗಳನ್ನು, ಹಲುಸಾದ ಪೈರುಗಳ
ಮರೆತವರು ಕಲೆಯಿರ್ರೈ ನಮ್ಮ ಕೊಳಗುಳದಿ ॥ ೫ ॥

ತರುಣ ಹೆಂಡಿರ ಕೂಡ ಸರಸವಾಡುವಕಾಲ
ಜಾರಿಹುದು ನಾಡಿಗರೆ, ಎಚ್ಚರಾಗಿರಿ ಇನ್ನು
ಪ್ರೇಮಮಯರೇ ನಿಮ್ಮ ಪ್ರೇಮಗೀತೆಯು ಬೇಡ
ನಾಡಿನಂಗಳಕಿಂದು ಬೆಂಕಿಬಿದ್ದಿಹದು
ವೀಳ್ವೆಯಂ ಕೈಗೊಟ್ಟು
ಹರಿಸಿ ಕೈ ಯುವತಿಯರೆ ನಿಮ್ಮ ರಾಯರನು॥ ೬ ॥

ನಿಮ್ಮ ಎದೆದರ್ಪದಿಂದರಿಯ ಧೈರ್ಯವು ಕುಗ್ಗಿ
ಗಡಗಡನೆ ನಡುಗಲ್ಕೆ ನಿಮ್ಮ ಕೈ ಮೇಲಾಗಲಿ
ಹೊಡೆದಾಡಿ ಮಡಿದರೇಂದು ಕೆಡರೇಸು ನಾಡಿಗರೆ
ವೀರಸ್ವಗ್ಗದ ರಾಣಿ ಪೂಮಾಲೆ ತೊಡಿಸುವಳು
ಸತ್ತ ಬಿದ್ದರೆ ಸಗ್ಗ, ಬದಕಿ ಉಳಿದರೆ ಸಾಕು ನಿಮ್ಮ
ದೈವವೇ ದೈವ ಹೇಡಿಗಳು ಕಾಣ್ಬುದೇನು ? ॥ ೭ ॥

ಶಾಂತತೆಯೆ ನಮ್ಮಗುರಿ, ಮಹಾತ್ಮನೆ ನಮ್ಮಹರಿ
ಸಾಹಸವೆ ಭಕ್ತಿಲಿತ ಭಾರತೀಯ ಪರದೈವವು
ಕೆಚ್ಚೆದೆಯ ಬಿಲ್ಲಿನಲಿ ಆಗ್ರಹದ ಕೂರಂಬು
ಶಾಂತತೆಯ ಟಂಕಾರದಿಂ ಭೋರ್ಗರೆಯಲು
ಎದುರಾಳು ಯಾವನವ ?
ಹೆದೆಗೆದುರು ನಿಲ್ಲುವದು ?
ಗಂಡುಗಲಿಗಳೆಸಾಗಿ ದಂಡಯಾತ್ರೆಗೆ ನೀವು
ಪರಯೆಯದು ನಿಮ್ಮುಡಿಯ ಬುತ್ತಿ॥ ೮ ॥

## ೭. ನಮ್ಮ ಧ್ವಜವು

ಇದು ತಪೋನಧಿ ಗಾಂಧಿ ಕಲ್ಪಿಸಿದ ಧ್ವಜವು
ಇದು ಭರತನ ಸಂತತಿಯ ಸರ್ವಸ್ವವು ॥ ಪಲ್ಲವಿ ॥
ಇದು ನಮ್ಮ ನಾಡಿನದ್ಯಾಸ್ಮಶಕ್ತಿ ಧ್ವಜವು
ಇದು ನಮ್ಮ ತಾಯ್ನಾಡ ಸೌಭಾಗ್ಯವು
ಇದು ನಮ್ಮ ನಾಡ ಪುಣ್ಯಪ್ರಕರ್ಷ ಧ್ವಜವು
ಇದು ನಮ್ಮ ತಾಯ್ನಾಡ ಚೈತನ್ಯವು ॥ ೧ ॥

ಇದರದರ್ಶನ ನಮಗೆ ಪರಮ ಪುಣ್ಯಪದವು
ಇದರಿಂದ ತೇಜಸ್ವಿ ನಾತ್ಕರ್ಷವು
ಇದರ ನೆರಳೊಳಗೆ ನಮ್ಮ ಸ್ವಾತಂತ್ರ್ಯ ಮಂದಿರವು
ಇದರಿಂದಲೇ ವಿಶ್ವದಭ್ಯುದಯವು ॥ ೨ ॥

ಇದರ ರಕ್ಷಣದಿಂದ ನಮ್ಮ ಸಂರಕ್ಷಣವು
ಇದರ ಮಾನವು ನಮ್ಮ ಸನ್ಮಾನವು
ಇದರ ಪಾವನ ಕೀರ್ತಿ ಸಕಲಭುವನವ್ಯಾಪ್ತಿ
ಇದು ಜಗಕೆ ಮಂಗಲವು ನಮ್ಮ ಧ್ವಜವು ॥ ೩ ॥

– ಸಾ.ರಾ

## ೮. ಕೆಚ್ಚೆದೆಯ ಒರೆಗಲ್ಲು

ಜಗದಜೀವಿಗಳೆಲ್ಲ ಮೋಹನನ ಪ್ರಭೆಯಲ್ಲಿ
ತಲೆಬಾಗಿ ಮಣಿಮಣಿದು ಸಂತಸದ ಕಡಲಲ್ಲಿ
ಸ್ವಾನಂದ ದರೆಯಾಗಿ ತೇಲು ತೇಲುತಲಿರಲು
ಬಿರುಗಾಳಿಯ ಭೀಕರದಿ ವಾರಿನಿಧಿ ಮೇಲ್ವಾಯ್ದು
ತೋಪ ತೆರೆಗಳ ತೂರ ಬರ್ದರಗಾಳಿಬೀರಿ
ಬಡಬಾಗ್ನಿಯಂ ಹುಂಸಿಸಾಗುವಂತೆ॥ ೧ ॥

ಭಾರತ ಕೆಚ್ಚೆದೆಗಳೊಗಿಲ್ಲ ಮೇಲ್ತಡಿ
ಸ್ವಾಸಾ ವಿಹಿರಿ ಹೃದಯ ಕುಗ್ಗಿಸಲೆಂದು
ಜೊಳ್ಳು ಭೀತಿಯತೋರಿ ನಾಡಿಗರು
ದೌರ್ಬಲ್ಯತನವಿಹಿತೋ ?
ಕಾಲಗತಿ ಹಿಸಿತೋ ?
ಕರುಬನಾ ಹಿಂದಿರಿಸಲು
ಏದೆಗಳಂಕದುವರೇ ? ನೋಡಿಲೆಂದು ॥ ೨ ॥

ಭಾರತೀಯ ಪಾಶವನ ಹರಿಯಲ್ಕೆ ಸಿದ್ಧನಿಹ
ಹುರಿಯಾಳು ಮೋಹನನನಾಳರಿಗೀನ್ನು
ನಿಗ್ಗಿಗಿಪ ಕಂಡವರ ಬೈಡನ ತದಂತೆ
ಸೆರೆಮನೆಗೆ ಕೊಂಡೊಯ್ದು ಮೊಸಲಿಹ
ಅಹುತಿಯ ಭಾರತೀಯ .....
ಸ್ವಾತಂತ್ರ್ಯ ಕುಂಡಕ್ಕೆ ॥ ೩ ॥

ತಾಯ್ನಾಡ ನಾಯಕನ ಬಂಧನದಿ ಕೊಡಿಟ್ಟು
ಹೇಡಿಗಳು ಕೈಗೆ ಚಾಲನೆಪ್ಪಣೆ ಕೊಟ್ಟು
ಹೆಣವಾಗಿ ಬಾಗುವಿರೋ ? ರಣದಲ್ಲಿ ಧುಮುಕುವಿರೋ ?
ಶೆರಗ ಮೋರೆಗೆ ಹಾಕಿ ಭೋರೆಂಡು ಅಳುವಿರೋ ?
ಹೇಳಿರೈ । ನಾಡಿಗರೆ ನಮ್ಮ ಮನೊಲವನು ॥ ೪ ॥

## ೯. ಸತ್ಯಾಗ್ರಹಿ

ದಂಡ ಪಟಕಿ ಶಿಕ್ಷೆ
ಶೆರೆಯ ಕೈದಿಗಂಜುದೆಲ್ಲಿ
ರುಂಡನಿಟ್ಟು ಪ್ರಾಣಬಿಡುವೆ
ಶೂಲ ಗಂಧದಲ್ಲಿ ॥ ೧ ॥

ಮಾಡಿದು ಪಡಿದು
ವೀರಮರಣ ತಾಯಿಯ ಸೇವೆಯಲ್ಲಿ
ದುಡಿದು ನೀಡು ಪ್ರಾಣ
ನಾಡ ಪ್ರೇಮ ಯಜ್ಞದಲ್ಲಿ ॥ ೨ ॥

ಹರಿದು ಸುರಿಗ ಹರಿದು ಹಾರಿ
ಅರಿಯ ಗುರುವ ಹರಿಸೈ
ತರುಣರರಕ್ತದಿಂದ ಉರಿವ
ಶೌರ್ಯ ಧೈರ್ಯ ತೋರಿಸೈ ॥ ೩ ॥

ನ್ಯಾಯನೀತಿ ಧರ್ಮದಿಂದ
ವೈರಿಯ ಶಿರವ ಬಾಗಿಸು
ಮಾಯ ಮೋಹ ತೊರದು
ಶರಣರ ತಲೆದೂಗಿಸು ॥ ೪ ॥

ಪಾರತಂತ್ರ್ಯ ಹರಿದು
ಹರುಷಗೊಳ್ಳು ಕಷ್ಟದೂಡು
ಸಾರವತ್ತ ಸರಸಮುಣ್ಯ ಭೂಮಿ ನಮ್ಮ ನಾಡು ॥ ೫ ॥

## ೧೦. ಅಖಿಲ ಭಾರತೀಯ ಧ್ವಜವು

ಅಖಿಲ ಭಾರತೀಯ ರಾಷ್ಟ್ರಧ್ವಜಕೆ ವಿಜಯವಾಗಲಿ
ನಿಖಿಲ ಲೋಕಪಾಲನೀ ಧ್ವಜಕೆ ಶುಭವ ನೀಯಲಿ ॥ ಪ ॥
ಸಿಂಧು ಭದ್ರೆ ಯಮುನೆ ಗಂಗೆ ನರ್ಮದಾಶ್ರಯ ಧ್ವಜಂ ।
ವಿಂಧ್ಯಸೇತು ಹಿಮಗಿರೀಂದ್ರ ಸಾಂದ್ರಕೇಂದ್ರ ಭೂಧ್ವಜಂ ॥ ೧ ॥

ವಿಮಲ ಪಾರಿಜಾತೆ ಕಮಲ ವಿಕಸಿತಾವ ನೀ ಧ್ವಜಂ ।
ಅಮರ ಲೋಕಮಾನ್ಯವಿಭವ ವಿಲಸಿತಾಂಬರ ಧ್ವಜಂ ॥ ೨ ॥

ಹಿಂದು ಮುಸಲಮಾನ ಸಕಲರೈಕ್ಯ ಲಾಂಛನ ಧ್ವಜಂ ।
ಗಾಂಧಿ ಚರಖ ಯುಕ್ತಗುಣ ಸುವರ್ಣ ಮೋಹನ ಧ್ವಜಂ ॥ ೩ ॥
ಮಾನಿನೀ ಕುಲಾಭೀಮಾನ ರಕ್ಷಣಾಕ್ಷರ ಧ್ವಜಂ ।

ಧೀನಬಾಲ ವೃದ್ಧಜಾಲ ಪಾಲನಾಕ್ಷಯ ಧ್ವಜಂ ॥ ೪ ॥
ಪಾರತಂತ್ರ್ಯ ಬಂಧನೋಗ್ರ ಪಾಶನಾಶಕ ಧ್ವಜಂ ।

ಭಾರತೀ ಸ್ವತಂತ್ರ ಮಂತ್ರ ಘೋಷ ಪೋಷಕ ಧ್ವಜಂ ॥ ೫ ॥

ಕ್ಷೇತ್ರ ಕಾರ್ಯದಲ್ಲಿ – ಹಾಡಿದವರು ಸೂರ್ಯ ಪಂಡಿತ ಉಪಾಧ್ಯಯರು

ಒಟ್ಟಾರೆ ೧೮೫೭ ರಿಂದ ೧೯೪೭ರ ವರೆಗೆ ನಡೆದ ಸ್ವಾತಂತ್ರ್ಯ ಚಳವಳಿಯ ವಿವಿಧ ಹಂತಗಳಲ್ಲಿ ಬಾಗಲಕೋಟೆ ಜಿಲ್ಲೆಯ ಜನರು ರಾಷ್ಟ್ರೀಯತೆ ಹೋರಾಟದ ಪ್ರತಿಯೊಂದು ಮಜಲುಗಳಿಗೆ ಸ್ಪಂದಿಸಿದರು. ಆರಂಭದಲ್ಲಿ ೧೮೫೭ರ ದಂಗೆಯ ಸಮಯದಲ್ಲಿ ಹಲಗಲಿ ಬೇಡರು ಬಂಡಾಯವೆದ್ದಿದ್ದರು. ನಂತರ ತೀವ್ರಗಾಮಿಗಳ ಕಾಲದಲ್ಲಿ ತಿಲಕರ ಪ್ರಭಾವಕ್ಕೆ ಒಳಗಾಗಿ ಸ್ವದೇಶಿ ಚಳುವಳಿ ಮಾಡಿ ಯಶಸ್ವಿಯಾದರು. ಗಾಂಧೀಜಿಯವರು ಚಳುವಳಿ ನಾಯಕತ್ವ ವಹಿಸಿಕೊಂಡಾಗ ಅಹಿಂಸಾತ್ಮಕ ಚಳವಳಿ ಆರಂಭಿಸಿದರು. ಮಾತೃ ಭೂಮಿಯ ವಿಮೋಚನೆಗಾಗಿ ಹೋರಾಡಿ ಆಗಸ್ಟ್ ೧೫, ೧೯೪೭ ರಂದು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು.

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |